ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

ರಿ.ನಂ. ಕೆ.ಆರ್.ಎನ್. ಸಂಪುಟ : 1 ಸಂಚಿಕೆ : 2 ಏಪ್ರಿಲ್ 16 ರಿಂದ 30–1997 ಪುಟಗಳು : 24 ರೂ. 5·



ಕೃಷ್ಣನ ತ್ರಿಭಂಗಿ - ಚೆರಿಯಮನೆ ಟೀನಾ ಜಯರಾಮ್

ಮೈಸೂರು

ಕೊಡಗು ಸಂಗಾತಿ

ಪತ್ರಿಕೆಗೆ

ನಮ್ಮೆಲ್ಲರ ಮನಪೂರ್ವಕ ಹಾರ್ಧಿಕ ಶುಭಾಶಯಗಳು.....

ಯಿಂದ :

ಶ್ರೀ ಕರ್ಣೇಯ್ಯನ ಚಿಣ್ಣಪ್ಪ ಕಾರ್ಯಪ್ಪ

ಕಾಫಿ ಪ್ಲಾಂಟರ್, ಅಧ್ಯಕ್ಷರು, ವಿ. ಎಸ್. ಎಸ್.ಎನ್.

ನಂಜರಾಯಪಟ್ಟಣ.

ಮತ್ತು

ಶ್ರೀಮತಿ ಕರ್ಣೇಯ್ಯನ ಗಿರಿಜಾ ಕಾರ್ಯಪ್ಪ

ಕು॥ ಕರ್ಣೇಯ್ಯನ ಭವ್ಯ ಕಾರ್ಯಪ್ಪ

ಮಾ॥ ಕರ್ಣೇಯ್ಯನ ಅನುಪ್ ಕಾರ್ಯಪ್ಪ

ಹಾಗೂ

ಶ್ರೀಮತಿ ಕರ್ಣೇಯ್ಯನ ರುಕ್ಮಿಣಿ ಚಿಣ್ಣಪ್ಪ

ದೂರವಾಣಿ : 08276-76445 (ಮನೆ)
08276-76455(ತೋಟದ ಅಂಗಡಿ ಮನೆ)



ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ಓ. ರಮೇಶ್

ಪ್ರಸಾರ ವ್ಯವಸ್ಥಾಪಕ :
ಪಟ್ಟಡ ಎಲ್. ಶಿವಕುಮಾರ್

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ

ಮುದ್ರಣ :
ಎಂ.ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,
ವಿನಾಯಕನಗರ, ಮೈಸೂರು-12

ಗೌರವ ವ್ಯವಸ್ಥಾಪಕ :
ಪಟ್ಟಡ ಎಂ. ಪ್ರಭಾಕರ್

ಜಾಹಿರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ

ನಂ. 322, ಬೊಗಾದಿ ಸರ್ಕಲ್,
ಹಿನಕಲ್ ಪೋಸ್ಟ್, ಮೈಸೂರು–17

ಒ ಳ ನೋ ೞ ಟ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ

ಸಂಪ್ರದಾಯ ಎಂದರೆ ಏನು ? ಎಷ್ಟು ಜನ ಅದನ್ನು ಪಾಲಿಸುತ್ತಿದ್ದಾರೆ. ನಾವು ನೀವು ಎಂಬ ಭೇದವಿಲ್ಲದ ಈ ಸಂಪ್ರದಾಯಕ್ಕೆ ಎಲ್ಲರು ತಲೆಬಾಗಿ ನಿಂತಿದ್ದೀರಿ. ಇದು ಶತಮಾನದ ಬಳುವಳಿ.

ಹಲವು ಸಂಪ್ರದಾಯಗಳಲ್ಲಿ ಮೈಮುಚ್ಚಲು ತೊಡುವ ತೊಡುಗೆಗಳು ಹಲವು ವಿಧ. ಉಡುಪುಗಳ ವಿನ್ಯಾಸದಲ್ಲಿ ಮಾನವ ಸೌಂಧರ್ಯವರ್ಧಮಾನನಾಗಿ ಕಂಗೊಳಿಸುತ್ತಾನೆ. ನಿಮ್ಮ ಮೈ ಮೇಲೆ ಕ್ಷಣ ಕಣ್ಣು ಹಾಯಿಸಿ, ಬ್ರಿಟೀಷರು ಬಿಟ್ಟುಹೋಗಿರುವ ಕೊಳೆಯೇ ಎದ್ದು ಕಾಣುತ್ತಿದೆ.

ಈ ಕ್ಷಣ ಕಾಲದ ಸೌಂದರ್ಯಕ್ಕಾಗಿ ವಿದೇಶದ ವಿನ್ಯಾಸಕ್ಕೆ ಮನಸೋತಿದ್ದೀರಿ. ನಿಮ್ಮ ಸಂಪ್ರದಾಯಕ್ಕೆ ಬಂದಾಗ ಬಿಳಿ ಕುಪ್ಪಸ, ರುಮಾಲು, ದಟ್ಟಿಗಳು, ಗೇಂಟೆ ಕಟ್ಟುವ ಸೀರೆಗಳು ಕಣ್ಣಮುಂದೆ ನಿಂತಾಗ ನಿಮ್ಮ ಮನದಲ್ಲಿ ಸ್ವಲ್ಪವಾದರು ಕಂಪನ ಕಂಡು ಬರುತ್ತದೆ. ಹಿಡಿತವಿಲ್ಲದ ಕಂಪನಗಳನ್ನು ಸರಹದ್ದಿಗೆ ತರಬೇಕಾದರೆ ಸ್ಥಿರ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಕೊಡಗಿನ ಗೌಡರ ಹಳೇ ಸಂಪ್ರದಾಯದ ಬಿಳಿ ಕುಪ್ಪಸ ರುಮಾಲು, ದಟ್ಟಿಗಳ ಪುನರ್ ಬಳಕೆಯಾಗಬೇಕಿದೆ. ಸ್ವಂತಿಕೆ, ತನ್ನತನದ ಪೂರ್ಣ ಬಳಕೆಗೆ ಪ್ರಯತ್ನಿಸೋಣ. ಇದರಿಂದ ಪುರಸ್ಕೃತಿ ಸಿಕ್ಕುವುದು ಮಾತ್ರವಲ್ಲದೆ ಒಂದೇ ನೊಗದ ಜೋಡಿ ಎತ್ತುಗಳ ರೂಪದಲ್ಲಿ ಮುನ್ನಡೆಸಿದರೆ ಸುಂದರ ಕೊಡಗಿಗೆ ಮೆರಗು ನೀಡಿದಂತಾಗುತ್ತದೆ.

ನೀವು ದೇಶದ ಪ್ರಬಲ ಜನಾಂಗಗಳಲ್ಲಿ ಒಂದು ಪಂಗಡ ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಸಹ ಬಾಳ್ವೆಯಿಂದ ಜೊತೆಯಾಗಿಯೇ ಮುಂದುವರಿಯಬೇಕಿದೆ. ಹಬ್ಬ ಹರಿದಿನಗಳಲ್ಲಿ ನಿಮ್ಮ ಉಡುಗೆಯನ್ನು ತೊಡುವುದರ ಮೂಲಕ ಕಳೆ ತನ್ನಿ. ನಮ್ಮ ಬಾಂಧವರು ತಪ್ಪದೆ ಇದೇ ಉಡುಪಿನಲ್ಲಿ ಬರುವಂತಾದರೆ ಎಷ್ಟು ಚೆನ್ನ. ಅಥವಾ ಈಗಿರುವ ಕಚ್ಚೆ ಪಂಚೆ ಕೋಟುಗಳಲ್ಲಿಯಾದರು ಬರಬೇಕಲ್ಲವೇ ?.

ಭಾರತ–ಪಾಕ್ ವ್ಯಾಪಾರ

ವಿಶ್ವದಾದ್ಯಂತ ಬೇರ್ಪಟ್ಟ ದೇಶಗಳು ಇಂದು ಒಂದುಗೂಡುತ್ತಿವೆ. ಪೂರ್ವ–ಪಶ್ಚಿಮ ಜರ್ಮನಿಗಳು ಒಂದಾಗಿವೆ. ಸಣ್ಣ ರಾಷ್ಟ್ರಗಳು ಏಕತೆಯಿಂದ ಇರಲು ಪ್ರಯತ್ನಿಸುತ್ತಿವೆ. ಆದರೆ ಸ್ವಾತಂತ್ರ್ಯದ ನಂತರ ಭಾರತ–ಪಾಕಿಸ್ತಾನದ ಸಂಬಂಧಗಳು ಹದಗೆಟ್ಟವು.

ಈ ಎರಡು ರಾಷ್ಟ್ರಗಳ ಮುಕ್ತ ವ್ಯಾಪಾರ ವಹಿವಾಟು ವಾರ್ಷಿಕ 7000 ಕೋಟಿ ರೂ.ಗಳಾಗಲು ಸಾಧ್ಯ. ಪಾಕಿಸ್ತಾನದ ಯುವ ಜನತೆ ಹಾಗೂ ನಮ್ಮಲ್ಲೂ ನೆರ ರಾಷ್ಟ್ರದೊಂದಿಗೆ ಸೌಹಾರ್ದತೆಯಿಂದ ಇರಲು ಅಂತರಾಳದಲ್ಲಿ ಅಪೇಕ್ಷೆ ಇದೆ. ಭಾರತ-ಪಾಕ್ ಸಂಬಂಧ ಮಧುರವಾಗಲಿ. ರಫ್ತು-ಆಮದುಗಳು ಹೆಚ್ಚಲಿ. ರಾಜಕೀಯ ನಾಯಕರು ಇತ್ತ ಗಮನಹರಿಸಲಿ.

ಪ್ರಥಮ ಸಂಚಿಕೆಯ ಮುಖಪುಟದ ವಿವರಣೆ :

"ಸಂತೋಷ ಕೂಟ" ಮಂಡ್ಯ, 1994ರಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಹಳೆ ಸಂಪ್ರದಾಯದ ಉಡುಪು ತೊಟ್ಟು ನೃತ್ಯಿಸಿದ ನಮ್ಮ ಕೊಡಗಿನ ಗೌಡ ಕುವರಿಯರು

ತಮ್ಮ ಆಸುಪಾಸಿನಲ್ಲಿ ನಡೆದ ಮತ್ತು ಜರುಗಿದ ಶುಭ ಸಮಾರಂಭಗಳು, ಹಬ್ಬ ಹರಿದಿನಗಳು ಹಾಗೂ ಜನನ ಮರಣ ವಿವರಗಳನ್ನೊಳಗೊಂಡ ವಿಷಯಗಳನ್ನು ಕಳುಹಿಸಿದ್ದಲ್ಲಿ ನಮ್ಮ 'ಸಂಗಾತಿ' ಪತ್ರಿಕೆಯು ಸುದ್ದಿ ವಿಭಾಗದಲ್ಲಿ ಪ್ರಕಟಿಸಲಿದೆ.

–ಸಂ.

ಸರ್‌ನೇಮ್‌ಗಳ ಸಂತೆ

ಹೆಸರುಗಳ ಹಿಂದು ಮುಂದೆಲ್ಲಾ ಸುಳಿದಾಡುವ ಸರ್‌ನೇಮ್‌ಗಳು ಜಾತ್ಯಾತೀತ ರಾಷ್ಟ್ರದ ನನ್ನ ಜಾತಿ ಯಾವುದೆಂದು ದೂರದ ನನ್ನವರಿಗೆ ಬಿತ್ತರಿಸುವ ಒಂದು ಉತ್ತಮ ಮಾಧ್ಯಮ

–ಮಾಲ-ಸುಬ್ರಹ್ಮಣ್ಯ

ಯಮುನ ಶಾಪ (ಜಾನಪದ ಕಥೆ)

ಗೋವುಗಳು ಮಾನವರಂತೆ ಮಾತನಾಡುತ್ತಿದ್ದ ಕಾಲವದು. ಆ ಕಾಲದಲ್ಲಿ ಬೀರಪ್ಪ, ಬೀರವ್ವ ಎಂಬ ಆದರ್ಶ ದಂಪತಿಗಳಿದ್ದರು. ಗಂಡನ ಮನಸ್ಸನ್ನು ಹೆಂಡತಿಯೂ,ಹೆಂಡತಿಯ ಮನಸ್ಸನ್ನು ಗುಡನು ಅರ್ಥಮಾಡಿಕೊಂಡು ಬಹಳ ಅನೋನ್ಯವಾಗಿದ್ದರು. ಸಂಪತ್ತು ಬೇಕಾದಷ್ಟಿದ್ದರು ಮಕ್ಕಳ ಭಾಗ್ಯವಿರಲಿಲ್ಲ. ಮಕ್ಕಳಿಲ್ಲದ ಮನೆ ಚಂದ್ರನಿಲ್ಲದ ರಾತ್ರಿಯಂತೆ. ಈ ಕೊರತೆಯಿಂದ ಬೀರಪ್ಪ ದಂಪತಿಗಳು ತುಂಬಾ ಚಿಂತೆಗೀಡಾಗಿದ್ದರು.

ಇಲ್ಲದ ವಸ್ತುವಿಗಾಗಿ ಚಿಂತಿಸಿ ಫಲ ಏನು ? ಈ ಕೊರತೆಯನ್ನು ತುಂಬಿಕೊಂಡು, ಚಿಂತೆಯನ್ನು ದೂರಮಾಡಲು ಏನಾದರೊಂದು ಪ್ರಯತ್ನ ಮಾಡುವ ಉದ್ದೇಶದಿಂದ ಒಂದು ಮುದ್ದಾದ ಹಸುವನ್ನು ಕೊಂಡು ತಂದರು. ಆ ಹಸುವಿಗೆ "ರಂಗಿ" ಎಂದು ಹೆಸರು ಇಟ್ಟು, ಹೊಟ್ಟೆಯಲ್ಲಿ ಹುಟ್ಟಿದ ಮಗಳೋ ಎಂಬಂತೆ ಲಾಲನೆ ಪಾಲನೆ ಮಾಡುತ್ತಿದ್ದರು. ರಂಗಿಗೂ ಬೀರಪ್ಪ, ಬೀರವ್ವ ಎಂದರೆ ಪಂಚಪ್ರಾಣ. ಅದೂ ಅಪ್ಪ, ಅವ್ವ ಎಂದೇ ಕರೆಯುತ್ತಿತ್ತು.

ರಂಗಿ ಸಾಮಾನ್ಯ ಹಸುವಾಗಿರದೆ ತ್ರಿಕಾಲ ಜ್ಞಾನಿಯಾಗಿತ್ತು. ಬೀರಪ್ಪನ ಆಯಸ್ಸು ಮುಗಿಯುತ್ತಾ ಬಂದಿರುವುದು ಅದರ ದೂರದೃಷ್ಟಿಗೆ ತಿಳಿಯುವುದು ತಡವಾಗಲಿಲ್ಲ. ಅವನು ಯಾವ ದಿನ ಎಷ್ಟು ಹೊತ್ತಿಗೆ ಸಾಯುತ್ತಾನೆ ಎಂಬ ವಿಚಾರವೂ ತಿಳಿದು ಹೋಯಿತು. ಈ ವಿಷಯ ಅರಿತ ರಂಗಿಯ ಮನಸ್ಸಿನಲ್ಲಿ ದುಃಖ ಮಡುಗಟ್ಟತೊಡಗಿತು. ಬೀರವ್ವ ವಿಧವೆಯಾಗಿ ದುಃಖಪಡುವುದನ್ನು ಊಹಿಸಲೂ ರಂಗಿಗೆ ಸಾಧ್ಯವಾಗುತ್ತಿರಲಿಲ್ಲ. ತಂದೆಯ ಪ್ರೀತಿ ತೋರುತ್ತಿದ್ದ ಬೀರಪ್ಪನಿಲ್ಲದ ಬದುಕು ರಂಗಿಗೂ ಅಸಹನೀಯವೆನಿಸುತ್ತಿತ್ತು. ರಂಗಿ ತನಗೆ ತಿಳಿದಿರುವುದನ್ನು ಗುಟ್ಟಾಗಿ ಇಟ್ಟಿದ್ದರೂ, ಬೀರಪ್ಪನನ್ನು ಸಾವಿನಿಂದ ಉಳಿಸುವ ಉಪಾಯವನ್ನು ಯೋಚಿಸುತ್ತಲೇ ಇತ್ತು.

ಮೂರನೆಯ ದಿನ ಗೋದೂಳಿ ಸಮಯಕ್ಕೆ ಯಮನು ಬಂದು ಬೀರಪ್ಪನ ಪ್ರಾಣವನ್ನು ಸೆಳೆದೊಯ್ಯುವ ದೃಶ್ಯ ಕಣ್ಣಿಗೆ ಕಟ್ಟಿದಂತಾದಾಗ, ರಂಗಿ ದುಃಖ ತಾಳಲಾರದೆ ಕಣ್ಣೀರು ಸುರಿಸುತ್ತಿತ್ತು. ಸ್ನಾನ ಮಾಡಲು ಬಂದ ಬೀರವ್ವ ರಂಗಿಯ ಕಣ್ಣೀರ ಕಂಡು ಹೌಹಾರಿದಳು. ಬೀರವ್ವಳು ತನ್ನ ಸೆರಗಿನಿಂದ ರಂಗಿಯ ಕಣ್ಣೀರು ಒರೆಸುತ್ತಾ, "ಮಗಳೇ ಏನಾಯಿತು? ಯಾರು ಏನು ಮಾಡಿದರು ನಿನಗೆ ಹೇಳು" ಎಂದು ಸಾಂತ್ವಾನ ಮಾಡಿದಾಗ, ವಿಷಯ ತಿಳಿಸುವುದೇ ಒಳಿತೆಂದು ಯೋಚಿಸಿದ ರಂಗಿ, "ಅವ್ವ ನಿನಗೆ ವಿಷಯ ತಿಳಿಸದೆ ಇನ್ನಾರಿಗೆ ಹೇಳಲಿ? ಇಂದಿಗೆ ಸರಿಯಾಗಿ ಮೂರನೆಯ ದಿನ ಗೋಧೂಳಿ ಸಮಯದಲ್ಲಿ ಅಪ್ಪ ಸಾಯುತ್ತಾನೆ" ಎನ್ನುತ್ತಾ ಕಣ್ಣೀರು ಸುರಿಸತೊಡಗಿತು. ರಂಗಿಯ ಮಾತನ್ನು ಕೇಳಿದ ಬೀರವ್ವನಿಗೆ ಗರಬಡಿದಂತಾಯಿತು. ಗಂಡನ ಸಾವನ್ನು ಮುಂದಾಗಿ ತಿಳಿದ ಬೀರವ್ವ ದುಃಖದಿಂದ ಕಣ್ಣೀರು ಸುರಿಸುತ್ತಾ ರಂಗಿಯ ಕಾಲಬಳಿಯಲ್ಲಿ ಕುಸಿದು ಗೋಳಾಡತೊಡಗಿದಳು.

ಆಗ ರಂಗಿಯೇ ಸಮಾಧಾನ ಮಾಡುತ್ತಾ "ಅವ್ವಾ ದೈವ ಇಚ್ಛೆಯನ್ನು ನಮ್ಮಿಂದ ತಡೆಯಲು ಸಾಧ್ಯವಿಲ್ಲ. ನಮ್ಮ ಪ್ರಯತ್ನವನ್ನು ನಾವು ಮಾಡುವ. ಅಪ್ಪನನ್ನು ಬದುಕಿಸಲು ನಾನು ಒಂದು ಉಪಾಯ ಹೇಳುತ್ತೇನೆ. ಯಾರಿಗೂ ವಿಷಯ ತಿಳಿಸದೆ ಗುಟ್ಟಾಗಿ ಕಾರ್ಯರೂಪಕ್ಕೆ ತರಬೇಕು" ಎಂದಾಗ ಬೀರವ್ವನಿಗೆ ನಿಧಿಯೇ ಸಿಕ್ಕಿದಷ್ಟು ಸಂತಸವಾಯಿತು. ದುಃಖಿಸುವುದನ್ನು ನಿಲ್ಲಿಸಿ, ಮುಂದೆ ರಂಗಿ ಏನು ಹೇಳುತ್ತದೆಯೋ ಎಂದು ಕಾತರಿಸಿದಳು.

ರಂಗಿ ಹೇಳಿತು, "ಯಮರಾಯ ಬಂದಾಗ, ಮನುಷ್ಯಳಾದ ನಿನ್ನ ಕಣ್ಣಿಗೆ ಕಾಣಲಾರ, ಆದರೆ ನನ್ನ ಕಣ್ಣಿಗೆ ಕಾಣಿಸುತ್ತಾನೆ. ನನ್ನ ಕುತ್ತಿಗೆಗೆ ಒಂದು ಗಂಟೆಯನ್ನು ಕಟ್ಟು. ಯಮರಾಯ ಬಂದಾಗ ನಾನು ಗಂಟೆ ಆಡಿಸಿ ಶಬ್ದ ಮಾಡುತ್ತೇನೆ. ಕೂಡಲೇ ನೀನು, ನಿನ್ನ ಕಣ್ಣಿಗೆ ಕಾಣದಿದ್ದರೂ, ಒಂದು ಚೆಂಬು ನೀರು ಹಿಡಿದುಕೊಂಡು ಬಂದು ಅವನನ್ನು ಬರಮಾಡಿಕೊಂಡಂತೆ ಸತ್ಕರಿಸು. ಆಗ ಸುಪ್ರೀತನಾದ ಯಮರಾಜ ಪ್ರತ್ಯಕ್ಷನಾಗಿ ವರ ಕೇಳೆಂದು ಕೇಳಿದಾಗ, "ಗಂಡನನ್ನು ಉಳಿಸಿಕೊಡು" ಎಂದು ಬೇಡಿಕೋ ಎಂದು ಬೇಡಿಕೋ ಎಂಬ ಉಪಾಯ ಸೂಚಿಸಿತು.

ಬೀರಪ್ಪನ ಸಾವಿನ ದಿನ ಬಂತು. ಅವನಿಗೆ ಸಾವಿನ ಬಗ್ಗೆ ಅರಿವೇ ಇರಲಿಲ್ಲ. ಹೊಲದಲ್ಲಿ ಸುತ್ತಾಡಿ ಬಂದ ಬೀರಪ್ಪನಿಗೆ ವಿಪರೀತ ಎದೆನೋವು ಶುರುವಾಯಿತು. ತಡೆಯಲಾರದೆ ಹಾಸಿಗೆಯ ಮೇಲೆ ಹೊರಳಾಡತೊಡಗಿದನು. ವಿಷಯ. ಅರಿವಿದ್ದ ಬೀರವ್ವ ಅವನಿಗೆ ಉಪಚರಿಸಿ ಹೊರಬಂದು ಅಂಗಳಕ್ಕೆ ಸೆಗಣಿ ಸಾರಿಸಿ, ರಂಗೋಲಿ ಹಾಕಿದಳು. ರಂಗಿಯ ಕುತ್ತಿಗೆಗೆ ಒಂದು ಗಂಟೆಯನ್ನು ಕಟ್ಟಿದಳು. ಯಾವುದರ ಗೊಡವೆ ಇಲ್ಲದ ಬೀರಪ್ಪ ಹಾಸಿಗೆಯಲ್ಲಿ ನರಳುತ್ತಿದ್ದ.

ಬೀರಪ್ಪನ ಸಾವಿನ ಗಳಿಗೆ ಬಂದಿತು ಯಮರಾಜ ಮೃತ್ಯು ಪಾಶದೊಂದಿಗೆ, ಕೋಣವನ್ನೇರಿ ಬಂದು ಬೀರಪ್ಪನ ಮನೆಯ ಮುಂದೆ ನಿಂತ. ತಕ್ಷಣ ರಂಗಿ ತನ್ನ

ಕೊರಳನ್ನಲ್ಲಾಡಿಸಿ ಗಂಟೆಯು ಸದ್ದುಮಾಡಿತು. ಅದಕ್ಕಾಗಿಯೇ ಕಾದಿದ್ದ ಬೀರವ್ವ ನೀರು ತುಂಬಿದ ಚೆಂಬನ್ನು ಕೈಯಲ್ಲಿ ಹಿಡಿದುಕೊಂಡು ಮುಂಬಾಗಿಲಲ್ಲಿ ಅಥಿತಿಯನ್ನು ಬರಮಾಡಿಕೊಳ್ಳತೊಡಗಿದಳು. ಒಳಗೆ ಕರೆದು ಆಸನ ನೀಡಿ ಬಗೆಬಗೆಯಾಗಿ ಸತ್ಕರಿಸಿದಳು. ಕಣ್ಣಿಗೆ ಕಾಣದ ಅತಿಥಿಯನ್ನು ಸತ್ಕರಿಸುವ ಪರಿ ಕಂಡ ಯಮರಾಜ ಆಶ್ಚರ್ಯಗೊಂಡರೂ, ದಿವ್ಯದೃಷ್ಟಿಯಿಂದ ಎಲ್ಲವನ್ನು ಅರ್ಥ ಮಾಡಿಕೊಂಡ ಬೀರವ್ವಳಿಗೆ ದ್ರೋಹ ಮಾಡಲು ಅವನ ಮನಸ್ಸು ಒಪ್ಪಲಿಲ್ಲ. ಸಂತುಷ್ಟನಾದ ಯಮಧರ್ಮರಾಯ ಬೀರವ್ವಳ ಮುಂದೆ ಪ್ರತ್ಯಕ್ಷನಾಗಿ ಏನಾದರು ವರ ಬೇಡುವಂತೆ ಹೇಳಿದ. ಇದನ್ನೇ ಕಾಯುತ್ತಿದ್ದ ಬೀರವ್ವ ಯಮರಾಯನ ಕಾಲಮೇಲೆ ಬಿದ್ದು ತನ್ನ ಪತಿಯ ಪ್ರಾಣ ಉಳಿಸಿ, ಮಾಂಗಲ್ಯಭಾಗ್ಯ ನೀಡುವಂತೆ ಬೇಡಿಕೊಂಡಳು. ತಥಾಸ್ತು ಎಂದ ಯಮರಾಜ, ಬೀರಪ್ಪನ ಪ್ರಾಣ ಸೆಳೆದುಕೊಳ್ಳಲಾರದೆ ಹೊರನಡೆದ.

ಈಗ ಅವನ ಕೋಪವೆಲ್ಲಾ ತನ್ನ ಕೆಲಸ ಹಾಳುಮಾಡಿದ ರಂಗಿಯ ಕಡೆಗೆ ಹೊರಳಿತು. ತನ್ನ ಮುಂದೆ ನಿಂತಿದ್ದ ರಂಗಿಯನ್ನು ಕಂಡಾಗ ಅವನ ಕೋಪ ಮೇರೆ ಮೀರಿತು. ಮಾತು ಬಂದ ಕಾರಣದಿಂದಲೇ ತನ್ನ ಕೆಲಸಕ್ಕೆ ವಿಘ್ನವಾಯಿತೆಂದು ಬಗೆದ ಯಮರಾಯ, "ಇನ್ನು ಮುಂದೆ ಗೋವುಗಳಿಗೆ ಮಾತು ಬಾರದೆ ಹೋಗಲಿ" ಎಂದು ಶಪಿಸಿದ. ಇತ್ತ ಬೀರಪ್ಪ ಎದೆನೋವಿನಿಂದ ಮುಕ್ತನಾಗಿ ಪ್ರಾಣ ಮರಳಿ ಪಡೆದರೂ, ರಂಗಿ ಮೂಕಳಾದಳು. ಅಂದಿನಿಂದ ಗೋವುಗಳು ಮೂಕ ಪ್ರಾಣಿಗಳಾದವು.

ಗೋವುಗಳಿಗೆ ತ್ರಿಕಾಲ ಜ್ಞಾನವಿದ್ದರು, ಮೂಕ ಪ್ರಾಣಿಗಳಾದ ಕಾರಣ ಏನೂ ಮಾಡಲಾರವೆಂಬ ನಂಬಿಕೆ ಮಲೆನಾಡ ಜನರಲ್ಲಿ ಇದೆ. ಹಾಗೆಯೇ ಯಮರಾಜ ಬಂದರೆ ಸಂತುಷ್ಟನಾಗಲಿ ಹಾಗೂ ಮನೆಯವರನ್ನು ಭಾದಿಸದಿರಲೆಂದು ಮನೆಯ ಮುಂಬಾಗಿಲ ಮೆಟ್ಟಿಲಬಳಿ ನೀರು ತುಂಬಿದ ತಂಬಿಗೆಯನ್ನು ಇಡುವ ಪದ್ಧತಿ ಇದೆ.

● **ಬೈತಡ್ಕ ಕೆ. ಹೇಮ**
ಪಾಲೂರು, ಕೊಡಗು

ಯುವಶಕ್ತಿಯ ನುಂಗುತ್ತಿದೆ – “ಪ್ರೀತಿ ಪ್ರೇಮ”

“ಲೋಕವೆ ಹೇಳಿದ ಮಾತಿದು, ಪ್ರೀತಿ ಮಾಡಬಾರದು ಮಾಡಿದರೆ ಜಗಕೆ ಹೆದರಬಾರದು” ಎಂದು ಸಿನಿಮಾದಲ್ಲಿ ಪ್ರೀತಿ ಮಾಡಿದ ಜೋಡಿಗಳು ಹಾಡಿಕುಣಿಯುವುದನ್ನು ನೀವು ಕೇಳಿರಬಹುದು, ನೋಡಿರಬಹುದು. ಮಹಾತ್ಮ ಗಾಂಧೀಜಿ, ಭಗವಾನ್ ಬುದ್ಧನಂತಹ ಮಹಾನ್ ವ್ಯಕ್ತಿಗಳು ಈ ನಾಡಿನಲ್ಲಿ ಜನ್ಮ ತಳೆದು ಪ್ರೀತಿಯ ಮಹತ್ವವನ್ನು ತಿಳಿಸಿದ್ದಾರೆ. ಪ್ರೀತಿಯಿಂದ ಜನಮನ ಗೆದ್ದಿದ್ದಾರೆ, ಅಂದರೆ ಇಲ್ಲಿ ಪ್ರೀತಿಯೆಂಬುದು ವಿಶಾಲಾರ್ಥವನ್ನು ಹೊಂದಿದೆ. ಸರ್ವರು ಸರ್ವರನ್ನು ಪ್ರೀತಿಸುವುದನ್ನು ಇದು ಸಾರುತ್ತದೆ. ಆದರೆ ಇಂದು ಇಲ್ಲಿರುವುದು ಆ ಪ್ರೀತಿ ಅಲ್ಲ ಯುವ ಜನತೆಯನ್ನು ತನ್ನ ಬುಟ್ಟಿಯಲ್ಲಿ ಹಾಕಿಕೊಂಡು ಅಟ್ಟಹಾಸದಿಂದ ಮೆರೆಯುತ್ತಿರುವ ‘ಲವ್’ಎಂಬ ಸಂಕುಚಿತ ಭಾವನೆ.

ನನ್ನ ಗೆಳೆಯನೊಬ್ಬನಿದ್ದ. ಅವನು ಸ್ಮಾರ್ಟ್ ಆಗಿ ಇದ್ದ. ಅವನ ಜೇಬು ಯಾವಾಗಲು ದಪ್ಪವಾಗಿರುತ್ತಿತ್ತು “ಇದ್ಯಾಕಪ್ಪ ಇವನು ಚಾಕಲೇಟ್ ತಂದಿದ್ದಾನೆ” ಅಂತ ಅವನ ಜೇಬು ನೋಡಿದರೆ, ಅಲ್ಲಿ ಇರುತ್ತಿದ್ದುದು ಚಾಕೊಲೇಟ್ ಪೇಪರ್, ಹೇರ್‌ಪಿನ್, ಸ್ಟಿಕರ್‌ಗಳು ! ಇಂತವೇ ಇನ್ನಿತರ ವಸ್ತುಗಳು. ನಾವು ಅವನ್ನು ಕಿತ್ತು ಎಸೆಯಲು ನೋಡಿದರೆ ಅದನ್ನು ಆತ ಮುಟ್ಟಲು ಬಿಡುತ್ತಿರಲಿಲ್ಲ! ಅದೊಂದು ಚಿದಂಬರ ರಹಸ್ಯದಂತೆ ನಮ್ಮನ್ನು ಕಾಡುತ್ತಿತ್ತು. ಬಹು ದಿನಗಳ ನಂತರ ಈ ರಹಸ್ಯ ಬಯಲಾಯಿತು. ಆತ ಒಬ್ಬ ಶ್ರೀಮಂತ ಹುಡಿಗಿಯನ್ನು ಲವ್ ಮಾಡುತ್ತಿದ್ದ, ಆ ಹುಡುಗಿ ಇವನನ್ನು ಕಂಡಾಗಲೆಲ್ಲಾ ತನ್ನ ಕೈಗೆ ಏನು ಸಿಗುತ್ತಿತ್ತೋ ಅದನ್ನು ‘ವಿತ್‌ಲವ್’ ಎಂದು ಹೇಳಿ ಕೊಟ್ಟುಬಿಡುತ್ತಿದ್ದಳು. ಅದನ್ನು ಈತ ಜೋಪಾನವಾಗಿಇಟ್ಟುಕೊಳ್ಳಲೇಬೇಕಿತ್ತು ಕಾರಣ ಅವಳು ಇನ್ನೊಮ್ಮೆ ಆ ವಸ್ತುಗಳನ್ನು ತೋರಿಸೆಂದಾಗ ತೋರಬೇಕಿತ್ತು. ಇಲ್ಲದಿದ್ದರೆ ‘ನನ್ನ ಮೇಲೆ ಇಷ್ಟೇನಾ ಪ್ರೀತಿ’ ಎಂದು ಮುನಿಸಿಕೊಳ್ಳುತ್ತಿದ್ದಳು. ಈ ರಹಸ್ಯ ನಮಗೆ ತಿಳಿಯುವ ಹೊತ್ತಿಗೆ ಈ ಹುಡುಗಿಯ ತಂದೆಗೆ ಮುಂಬೈಗೆ ವರ್ಗವಾಗಿ ಕುಟುಂಬ ಸಹಿತ ಈ ಊರು ಬಿಟ್ಟಾಗಿತ್ತು. ನಮ್ಮ ಗೆಳೆಯ ವಿರಹ ಗೀತೆ ಹಾಡುತ್ತಾ ಈಗ ಇಲ್ಲಿ ಚೆನ್ನಾಗಿದ್ದಾನೆ.

ಇನ್ನೊಬ್ಬ ಗೆಳೆಯ ಇದ್ದ, ಅವನ ಹತ್ತಿರ ಒಂದು ಲೂನಾ ಇತ್ತು. ಆಗ ಒಂದು ಹುಡುಗಿಯನ್ನು ಲವ್ ಮಾಡುತ್ತಿದ್ದ, ಆ ಲೂನ ಮುರಿದು ಬಿದ್ದಾಗ ಆ ಲವ್ವು ಮುರಿದು ಬಿತ್ತು. ಮತ್ತೊಂದು ಮೊಪೆಡ್ ತೆಗೆದುಕೊಂಡ, ಬೇರೊಬ್ಬಳ ಲವ್ ಪ್ರಾರಂಭವಾಯಿತು. ಅದನ್ನು ಮುರಿದಾಗ ಆ ಲವ್ವು ಕಟ್ಟಾಯಿತು. ಇನ್ನೊಂದು ತೆಗೆದುಕೊಂಡಾಗ ಮತ್ತೊಂದು ಪ್ರಾರಂಭ ಹೀಗೆ ಈ ಗೆಳೆಯ ಆರು ಕಳೆದು ಏಳನೇ ಲವ್‌ಗೆ ಸಪ್ತಪದಿ ಎಂದು ಹಾಡುತ್ತಾ ಹೆಜ್ಜೆಯನ್ನಿಟ್ಟಿದ್ದಾನೆ.

ಮತ್ತೊಬ್ಬ ಗೆಳೆಯ ತುಂಬಾ ಬಡವ, ನೋಡಲು ಅಷ್ಟೇನು ಲುಕ್ಕಾಗಿ ಇರಲಿಲ್ಲ. ಆದರೂ ಒಂದು ಹುಡುಗಿ ಲವ್ ಮಾಡಲಾರಂಭಿಸಿದಳು. ತನ್ನಲ್ಲಿದ್ದ ಅಲ್ಪಸ್ವಲ್ಪ ಹಣವನ್ನು ಆಕೆಯ ಕಲ್ಯಾಣಕ್ಕೆ (ವಿವಾಹಕ್ಕಲ್ಲ) ಸುರಿದು ಕೈಯೆಲ್ಲ ಬರಿದು ಮಾಡಿಕೊಂಡ ಮೇಲೆ ಆ ಹುಡುಗಿ ಮತ್ತೊಬ್ಬ ಹುಡುಗನನ್ನು ಲವ್ ಮಾಡಲಾರಂಭಿಸಿದಳು. ಅಷ್ಟಕ್ಕೆ ಬಡಪಾಯಿ ಸುಮ್ಮನಿರಬೇಕಲ್ಲ, ಗಣೇಶ ಉತ್ಸವ ನಡೆಯುವಾಗ ಸಾರ್ವಜನಿಕರ ಎದುರೇ ನಡುರಸ್ತೆಯಲ್ಲಿಯೆ ಹುಡುಗಿಯನ್ನು ಚುಂಬಿಸಿ ಪೋಲಿಸ್ ಆತಿಥ್ಯ ಸ್ವೀಕರಿಸಿ ಬಂದ.

ಹೀಗೆ ಹೇಳುತ್ತಾ ಹೋದರೆ ಲವ್‌ನ ಕಥೆಗಳು ಅನಂತವಾಗಿರುತ್ತವೆ. ಏಕೆಂದರೆ ಇಂದಿನ ಯುವಕ ಯುವತಿಯರು ಲವ್‌ನಲ್ಲಿ ತೊಡಗಿರುವವರೇ ಬಹುಮಂದಿ. ಮೇಲಿನ ಘಟನೆಗಳನ್ನು ನೋಡಿದಾಗ ಕೇವಲ ಯುವತಿಯರೇ ತಪ್ಪು ಮಾಡಿರುವಂತೆ ಗೋಚರಿಸುತ್ತಾದರೂ, ಯುವಕರೂ ಅಷ್ಟೇ ತಪ್ಪನ್ನು ಮಾಡುತ್ತಾರೆ.

ಅಲ್ಲೊಂದು ಕುಟುಂಬ ನೆಮ್ಮದಿಯ ಜೀವನ ನಡೆಸುತ್ತಿತ್ತು. ಆ ಮನೆಯಲ್ಲಿ ಸುಂದರಿಯೂ, ಮುಗ್ಧಳೂ ಆದ, ಹತ್ತನೇ ತರಗತಿಯಲ್ಲಿ ಓದುತ್ತಿದ್ದ ಹುಡುಗಿಯಿದ್ದಳು. ಆಕೆಯ ನೋಡಿದ ಹುಡುಗನೊಬ್ಬ ಅವರಿಗೆ ಸಹಾಯ ಮಾಡುವ ನೆಪದಲ್ಲಿ ಅವರ ಮನೆಗೆ ಬರಲಾರಂಭಿಸಿದ, ಮನೆಯವರ ನಂಬಿಕೆಗಳಿಸಿ ಕ್ರಮೇಣ ಅವರ ಮನೆಯಲ್ಲೇ ಕಾಲಕಳೆಯಲಾರಂಭಿಸಿದ. ಹುಡುಗಿಯ ಮನಸ್ಸನ್ನು ಆಕರ್ಷಿಸಿದ, ಲವ್ ಪ್ರಾರಂಭವಾಗಿತು. ಕೊನೆಗೊಂದು ದಿನ ಮನೆಯವರಿಗೆ ಗೊತ್ತಾದಾಗ ಕಾಲಿಗೆ ಮುಳ್ಳು ಚುಚ್ಚಿಕೊಂಡಿರುವ ಅನುಭವವಾಯಿತು. ಹುಡುಗನನ್ನು ಮತ್ತೆಂದೂ ಮನೆಗೆ ಬರದಂತೆ ಸೂಚಿಸಿದರು ಆದರೆ ಮಾರನೇ ದಿನ ಸ್ಕೂಲ್‌ಗೆ ಹೋದ ಹುಡುಗಿ ಮನೆಗೆ ಬರಲಿಲ್ಲ, ಹುಡುಗನೂ ಆ ಊರಲ್ಲಿರಲಿಲ್ಲ.

ಮತ್ತೊಬ್ಬ ಹುಡುಗ ಒಂದು ಹುಡುಗಿಯನ್ನು, ತನ್ನನ್ನು ಪ್ರೀತಿಸುವಂತೆ ಒತ್ತಾಯಿಸಿದ, ಆಕೆ ಒಪ್ಪದಿದ್ದಾಗ ಅಕೆಯ

ಮುಖಕ್ಕೆ ಆಸಿಡ್ ಎರಚಿ ಪರಾರಿಯಾದ. ಹೀಗೆ ಪರಸ್ಪರ ಯುವಕ, ಯುವತಿಯರು ನಂಬಿಸಿ ಲವ್ ಮಾಡಿ, ವಂಚಿಸಿ ದೂರವಾಗುತ್ತಾರೆ. ಈ ಕಾರ್ಯವೂ ಅಷ್ಟೇನೂ ಕಷ್ಟವಲ್ಲ, ಆದರೆ ಪರಿಣಾಮ ಮಾತ್ರ ಗಂಭಿರವಾಗುತ್ತದೆ, ಯುವಜನತೆಯಲ್ಲಿ ಉನ್ಮಾದವನ್ನು ತಂದು ಆಕಾಶದಲ್ಲಿ ಹಾರಾಡಿಸುತ್ತದೆ. ಅದು ಕಟ್ ಆದಾಗ ಮೇಲಿನಿಂದ ಕೆಳಗೆ ಎಸೆಯುತ್ತದೆ. ಎಷ್ಟೋ ಯುವಕರು ಇದರಿಂದ ವಿಕೃತ ಮನಸ್ಸಿನವರಾಗುತ್ತಾರೆ. ಅವರಿಗೆ ಬಲಿಯಾಗುವುದು ಮಾತ್ರ ಮುಗ್ಧರು. ಸಮಾಜದಲ್ಲಿ ಇಂದು ಪ್ರತಿಯೊಬ್ಬರು ಸಂಶಯದ ರೀತಿಯಿಂದಲೆ ನೋಡುವ ಪ್ರವೃತಿ ಬೆಳೆಯುತ್ತಿದೆ. ಈ ಸಂಶಯ ಪ್ರವೃತ್ತಿ ಸಂಸಾರಸ್ಥ ಪತಿ-ಪತ್ನಿಯರನ್ನು ಬಿಡದೆ ಬೆಂಬತ್ತಿದೆ. ಕೇವಲ ಬೆರಳೆಣಿಕೆಯ ಮಂದಿ ಮಾತ್ರ ಲವ್ ಮಾಡಿ ಮದುವೆಯಾಗಿ ಸುಖವಾಗಿದ್ದಾರೆ. ತಾವು ಜವಾಬ್ದಾರಿಯಿಂದ ನೆಲೆನಿಂತ ಮೇಲೆ ಲವ್ ಮಾಡಿದರೆ ಅದರಿಂದ ಅಷ್ಟೊಂದು ದುಷ್ಪರಿಣಾಮವಾಗಲಿಕ್ಕಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಆದರೆ ಇಂದು ಹೈಸ್ಕೂಲು ಮೆಟ್ಟಲೇರುತ್ತಿದ್ದಂತೆಯೇ ಲವ್‌ಗಳು ಹುಟ್ಟಿಕೊಳ್ಳುತ್ತವೆ. ಚಲನ ಚಿತ್ರದಂತಹ ಮಾಧ್ಯಮಗಳು ಇದಕ್ಕೆ ಪುಷ್ಟಿಯನ್ನು ನೀಡುತ್ತವೆ.

ಒಟ್ಟಾರೆ ಹೇಳುವುದಾದರೆ ಲವ್‌ಗೆ ಭಯಂಕರ ಶಕ್ತಿಯಿದೆ. ತಮ್ಮನ್ನು ಸಾಕಿ ಸಲಹಿದ ತಂದೆ ತಾಯಿಯವರನ್ನು ಬಿಟ್ಟು ದೂರ ಹೋಗುವ, ತಮ್ಮ ದಾರಿಗೆ ಅಡ್ಡ ಬಂದವರನ್ನು ಕೊಲೆ ಮಾಡುವ, ತಾವೇ ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಕ್ಕೂ, ಈ ದೌರ್ಬಲ್ಯಕ್ಕೊಳಗಾದವರು ಇಳಿಯುತ್ತಾರೆ. ಅಷ್ಟೊಂದು ಅಗಾದ ಶಕ್ತಿಯನ್ನು ಅಲ್ಲಿಂದ ಬೇರ್ಪಡಿಸಿ ಸದ್ವಿನಿಯೋಗ ಮಾಡಿದರೆ, ಅದೇ ರಾಷ್ಟ್ರ ಭಕ್ತಿಯಿಂದ ಕೂಡಿದ ಪ್ರೇರಕ ಯುವಶಕ್ತಿ ದೋಷಗಳಿಂದ ಮುಕ್ತಗೊಂಡ ಶುದ್ಧಾತ್ಮ ಶಕ್ತಿ. ಸ್ವಾಮಿ ವಿವೇಕಾನಂದರು ಬಯಸಿದ್ದು ಆ ಶಕ್ತಿಯನ್ನೇ....

● **ಪಟ್ಟಡ ಶಿವಕುಮಾರ್**

ಚಿನ್ನದ ಹೊನ್ನಿನ ಶ್ರೀ ಜಗನ್ಮಾತೆ ಕಾವೇರಿ



ದೇಶಕ್ಕೊಂದು ಮಹಾದೇವಿ, ಕಾವೇರಿ ಮಹಾತಾಯಿ,
ನಾಡಿಗೊಂದು ಮಹಾದೇವ, ಊರಿಗೊಂದು ಪೊವದಿ,
ಕೇರಿಗೊಂದು ಅಯ್ಯಪ್ಪ, ಕುಟುಂಬಕ್ಕೊಂದು ಗುರುಕಾರೋಣ
ಆಸ್ತಿಗೊಂದು ನಾದನೂ, ಓಣಿಗೊಂದು ಪೂದನು,
ಮನೆಗೊಂದು ಬಾಡೆಯು, ಬಾಡೆಗೊಂದು ನೆಲ್ಲಕ್ಕಿ ದೀಪವು
ಕಾವೇರಿ, ಈ ನಾಡಿನಲ್ಲಿ ದೈವನೆಲೆಯಾಗಿರುವುದು ನಮ್ಮಭಾಗ್ಯ

ಬಹುಮುಖ ಯುವ ಪ್ರತಿಭೆಯ ಪಾಲೂರಿನ ಶ್ರೀ ಬೈತಡ್ಕ ಕೆ. ಶಶಿಧರ

"ಮನಸ್ಸೊಂದಿದ್ದರೆ ಮಾರ್ಗ ಉಂಟು, ಕೆಚ್ಚೆದೆ ಇರಬೇಕು" ಎಂಬ ಕವಿವಾಣಿಯನ್ನು ನಿಜವಾಗಿಸಿದ ಬಹುಮುಖ ಪ್ರತಿಭೆಯ 24ರ ಹರೆಯದ ಉತ್ಸಾಹಿ ಯುವಕ ಶ್ರೀ ಬಿ.ಕೆ. ಶಶಿಧರ ಇವರಿಗೆ 1995-96ನೇ ಸಾಲಿನ ಭಾರತ ಸರಕಾರದ "ರಾಜೀವ್ ಗಾಂಧಿ ರಾಷ್ಟ್ರೀಯ ಯುವ ಪ್ರಶಸ್ತಿ" ಬಂದಿರುವುದು ಇವರ ಪ್ರತಿಭೆಗೆ ಸಂಥ ಗೌರವ.

3-7-1973ರಂದು ಕೊಡಗು ಜಿಲ್ಲೆಯ ಪಾಲೂರು ಗ್ರಾಮದಲ್ಲಿ ಇವರು ಜನಿಸಿದರು. ತಂದೆ ಬೈತಡ್ಕ ಕುಂಞಪ್ಪ ತಾಯಿ ಹೇಮ. ತಂದೆ ದ. ಕ. ಜಿಲ್ಲೆಯ ಪುತ್ತೂರಿನ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಗನ ವಿದ್ಯಾಭ್ಯಾಸ ಉಪ್ಪಿನಂಗಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾರಂಭವಾಯಿತು. ಮಗನ ಅಪ್ರತಿಮ ಪ್ರತಿಭೆ ಮತ್ತು ಕ್ರೀಡೆಯನ್ನು ತಾಯಿ ಗುರುತಿಸಿದರು. ಶಾಲೆಯ ಆಟೋಟ, ನಾಟಕಗಳಲ್ಲಿ ತಪ್ಪದೆ ಭಾಗವಹಿಸುವಂತೆ ನೋಡಿಕೊಂಡರು. ಇದು ಶಶಿಧರನ ಮುನ್ನಡೆಗೆ ನಾಂದಿಯಾಯಿತು. ಇವರು ಪಾಠದಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ನಿಂತರು. 7ನೇ ತರಗತಿಗೆ ಬರುವಷ್ಟರಲ್ಲಿ 400 ಮೀ., 800 ಮೀ ಮತ್ತು 1500 ಮೀ. ಓಟದಲ್ಲಿ ಕಿರಿಯರ ವಿಭಾಗದಲ್ಲಿ ಅತ್ಯುತ್ತಮ ಸಾಧನೆ ಮಾಡಿ ಪ್ರಥಮ ಸ್ಥಾನದಲ್ಲಿ ನಿಂತರು.

ಮುಲ್ಕಿಯಲ್ಲಿ ಇವರು ಸರಕಾರಿ ಪದವಿಪೂರ್ವ ಕಾಲೇಜಿನ ಹೈಸ್ಕೂಲ್ ವಿಭಾಗದಲ್ಲಿ ಆಂಗ್ಲ ಮಾಧ್ಯಮದ ವಿದ್ಯಾರ್ಥಿಯಾದರು. ಓದಿನ ಜೊತೆ ಜೊತೆಗೆ ಓಟದ ಸಾಧನೆಯೂ ಮುಂದುವರೆಯಿತು ಎನ್.ಸಿ.ಸಿ. ಯಲ್ಲಿ ತೀವ್ರ ಆಸಕ್ತಿ ತೋರಿ ನೌಕಾದಳದ ಕೆಡೆಟ್ ಆಗಿ ಹೆಸರು ಗಳಿಸಿದರು. ಎಸ್.ಎಸ್.ಎಲ್.ಸಿ. ಮುಗಿಯುವಷ್ಟರಲ್ಲಿ ಉತ್ತಮ ಆಟಗಾರನೆಂದು ಗುರುತಿಸಲ್ಪಟ್ಟರು.

ಮುಲ್ಕಿಯ ವಿಜಯಾ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ.ಗೆ ದಾಖಲಾದರು.



ಶ್ರೀ ಬಿ.ಕೆ. ಶಶಿಧರ

ಅಷ್ಟರಲ್ಲಿ ರಾಜ್ಯ ಸರಕಾರದ ಕ್ರೀಡಾ ಇಲಾಖೆಯು ಪ್ರತಿಭೆಯನ್ನು ಗುರುತಿಸಿತು ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿರುವ ಕ್ರೀಡಾ ತರಬೇತಿ ಶಾಲೆಗೆ ಆಯ್ಕೆ ಮಾಡಿತು. ಅಲ್ಲಿ ಕ್ರೀಡಾ ತರಬೇತಿಯ ಜೊತೆಗೆ ಸಂತ ಜೋಸೆಫ್ ಕಾಲೇಜಿನಲ್ಲಿ ಪಿ.ಯು.ಸಿ ವಿದ್ಯಾಭ್ಯಾಸವನ್ನು ಮುಗಿಸಿದರು. ಈ ಅವಧಿಯಲ್ಲಿ ಹಲವಾರು ಕ್ರೀಡಾಕೂಟದಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಉಳಿಸಿಕೊಂಡರು. 800 ಮೀ. ಓಟದಲ್ಲಿ ರಾಷ್ಟ್ರ ಮಟ್ಟದ ದ್ವಿತೀಯ ಸ್ಥಾನ ಪಡೆದು, ರಾಷ್ಟ್ರಮಟ್ಟದ ಕ್ರೀಡಾಪಟುವಾದರು. ದಸರಾ ಕ್ರೀಡಾ ಕೂಟಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನು ಪಡೆದರು.

ತಂದೆಯ ಅನಾರೋಗ್ಯದ ಕಾರಣ ಮುಲ್ಕಿಗೆ ಹಿಂದಿರುಗಿದರು. ಮೂಡುಬಿದಿರೆಯ ಮಹಾವೀರ ಕಾಲೇಜಿನಲ್ಲಿ ಓದು ಮುಂದುವರೆಸಿ ಬಿ.ಎ. ಪದವೀಧರರಾದರು. ಈ ಅವಧಿಯಲ್ಲಿ ಹಲವು ಬಾರಿ ರಾಜ್ಯ ಮಟ್ಟದ ಕ್ರೀಡಾ ಕೂಟಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ ಹಲವು ಬಾರಿ ಚಾಂಪಿಯನ್‌ಶಿಪ್ ಗಳಿಸಿದ್ದಾರೆ.

ಜೊತೆಗೆ ಚಿತ್ರಕಲೆಯ ಹವ್ಯಾಸವನ್ನು ಬೆಳೆಸಿಕೊಂಡಿದ್ದರು. ಉಬ್ಬುಚಿತ್ರ ರಚನೆ, ಕಾರ್ವಿಂಗ್ ಮತ್ತು ವರ್ಣ ಚಿತ್ರ ರಚನೆಯಲ್ಲಿ ಉತ್ತಮ ಪ್ರೌಢಿಮೆ ಇದೆ 1993ರ ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಇವರು ರಚಿಸಿದ ವರ್ಣ ಚಿತ್ರ ಮೆಚ್ಚುಗೆ ಪಡೆಯಿತು. ಶ್ರವಣಬೆಳಗೊಳದ ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕ ಸಮಯದಲ್ಲಿ ನಡೆದ ಚಿತ್ರಕಲಾ ಪ್ರದರ್ಶನದಲ್ಲಿ ರಚಿಸಿದ ಕಾರ್ವಿಂಗ್ ಚಿತ್ರಕ್ಕೆ ದ್ವಿತೀಯ ಸ್ಥಾನ ಲಭಿಸಿತು.

ಪ್ರಸ್ತುತ ಮಂಗಳ ಗಂಗೋತ್ರಿಯಲ್ಲಿ ಅಂತಿಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾರೆ. ಈಗ ತನ್ನ ಗಮನವನ್ನು ಓಟದ ಕಡೆಯಿಂದ ಸಾಂಸ್ಕೃತಿಕ ಚಟುವಟಿಗಳ ಕಡೆಗೆ ಹೊರಳಿಸಿದ್ದಾರೆ. 1994-95 ಸಾಲಿನಲ್ಲಿ ಮಂಗಳ ಗಂಗೋತ್ರಿಯಲ್ಲಿ ಅವರ ಚಿತ್ರಕಲಾ ಪ್ರದರ್ಶನ ನಡೆಯಿತು. 'ಮೊಮೆಂಟೋ-94' ಅಂತರ ವಿಶ್ವವಿದ್ಯಾನಿಲಯ ಸ್ಪರ್ಧೆಯಲ್ಲಿ ಬೆಸ್ಟ್ ಔಟ್ ಸ್ಟ್ಯಾಂಡಿಂಗ್ ಸ್ಟೂಡೆಂಟ್ ಅವಾರ್ಡ್ ಪಡೆದರು.

12-8-1995 ರಿಂದ 11-10-1995 ರವರೆಗೆ ಮಾಲ್ಡೀವ್ಸ್ ಮತ್ತು ಜರ್ಮನಿ ರಾಷ್ಟ್ರಗಳಲ್ಲಿ ನಡೆದ ಭಾರತ ಸಾಂಸ್ಕೃತಿಕ ಉತ್ಸವದಲ್ಲಿ ಭಾರತದ ಪ್ರತಿನಿಧಿಗಳಲ್ಲೊಬ್ಬರಾಗಿ ಭಾಗವಹಿಸಿದರು. ಈ ಉತ್ಸವದಲ್ಲಿ

ತಮ್ಮ ಮೂಕಾಭಿನಯ ಮತ್ತು ಏಕ ಪಾತ್ರ ಅಭಿನಯಗಳಿಗಾಗಿ, ನಾಲ್ಕು ಅಂತ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದು ಭಾರತಕ್ಕೆ ಕೀರ್ತಿಯನ್ನು ತಂದರು. ಪ್ರತಿಭೆಯನ್ನು ಗುರುತಿಸಿದ ಭಾರತ ಸರಕಾರವು 26-1-1996 ರಂದು ಪೂನಾದಲ್ಲಿ ರಾಜೀವ್‌ಗಾಂಧಿ ರಾಷ್ಟ್ರೀಯ ಯುವ ಪ್ರಶಸ್ತಿಯನ್ನು ಪ್ರಧಾನ ಮಾಡಿದೆ.

ಶ್ರೀಯುತರು 1996 ರ ಜುಲೈ ತಿಂಗಳಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದರು ಮತ್ತು ಸರ್ವಾಂಗೀಣ ಪ್ರಶಸ್ತಿಗಳಿಸಿದರು. ಹಾಲೆಂಡ್‌ನಲ್ಲಿ ನಡೆಯಲಿದ್ದ ವಿಶ್ವ ಸಾಂಸ್ಕೃತಿಕ ಸಮ್ಮೇಳನದಲ್ಲಿ ಭಾಗವಹಿಸಲಿದ್ದ ಭಾರತ ತಂಡದ ನಾಯಕನನ್ನಾಗಿ ಆಯ್ಕೆ ಮಾಡಲಾಯಿತು.

1996 ರ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಹಾಲೆಂಡ್‌ನಲ್ಲಿ ನಡೆದ ವಿಶ್ವ ಸಾಂಸ್ಕೃತಿಕ ಸಮ್ಮೇಳನದಲ್ಲಿ ಭಾರತ ತಂಡದ ನಾಯಕರಾಗಿ ಭಾಗವಹಿಸಿದರು. ಮೂಕಾಭಿನಯದಲ್ಲಿ ವಿಶ್ವಪ್ರಶಸ್ತಿಯನ್ನು ಗಳಿಸಿದರು. ವಿಶ್ವ ಸಾಂಸ್ಕೃತಿಕ ಸಮ್ಮೇಳನದಲ್ಲಿ "ಬೆಸ್ಟ್ ಆಲ್‌ರೌಂಡರ್" ಪ್ರಶಸ್ತಿ ಪಡೆಯುವಲ್ಲಿ ಕೂಡ ಸಫಲರಾದರು. ಈ ಸಮ್ಮೇಳನದಲ್ಲಿ ಭಾಗವಹಿಸಿದ ದಕ್ಷಿಣ ಭಾರತದ ಏಕೈಕ ಪ್ರತಿನಿಧಿ.

ಇದೇ ಸಮಯದಲ್ಲಿ ಇಂಡೋನೇಷ್ಯಾದ ಜಾವಾದಲ್ಲಿ ನಡೆದ "ಸೆಮಿನಾರ್ ಆನ್ ಕಲ್‌ಚರಲ್ ಡೆವಲಪ್‌ಮೆಂಟ್ ಇನ್ ಏಷ್ಯಾ" ದಲ್ಲಿ ಭಾರತದ ಸಾಂಸ್ಕೃತಿಕ ಪ್ರತಿನಿಧಿಗಳಲ್ಲಿ ಒಬ್ಬರಾಗಿ ಭಾಗವಹಿಸಿದರು. ಹಾಗೆಯೇ ಫ್ರಾನ್ಸ್, ಬ್ರಿಟನ್ ಮತ್ತು ಸಿಂಗಾಪುರ್‌ಗಳಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

1997 ರ ಜನವರಿ 7 ರಂದು ಮಂಗಳೂರಿನ "ಕುಡಿಗೆ ಫೌಂಡೇಶನ್" ದಕ್ಷಿಣ ಕನ್ನಡ ಜಿಲ್ಲೆಯ ಶ್ರೇಷ್ಠ ಯುವ ಪ್ರಶಸ್ತಿ ನೀಡಿ ಗೌರವಿಸಿದೆ. ಇತ್ತೀಚೆಗೆ ಕೊಡಗು ಗೌಡ ಸಮಾಜ, ಮಡಿಕೇರಿ ಮತ್ತು ಕನ್ನಡ ಸಂಘ ವೀರರಾಜಪೇಟೆಯಲ್ಲಿ ಇವರಿಗೆ "ಕೊಡಗು ಶ್ರೀ" ಬಿರುದು ನೀಡಿ ಗೌರವಿಸಿದೆ.

1997 ಜನವರಿ ತಿಂಗಳ 27, 28 ರಂದು ಮಡಿಕೇರಿಯಲ್ಲಿ ನಡೆದ ಕೊಡಗು ಉತ್ಸವದಲ್ಲಿ ಸನ್ಮಾನಿಸಲಾಯಿತು. ಈ ಎಲ್ಲ ಸಾಧನೆಗಳು ನವ ಯುವಕರಿಗೆ ಒಂದು ಮಾದರಿಯಾಗಿದೆ. ಯುವಕರು ತಮ್ಮ ಪ್ರತಿಭೆಗಳನ್ನು ಕಂಡುಕೊಂಡು ಅದನ್ನು ಪ್ರಾಮಾಣಿಕವಾಗಿ ಸರಿಯಾದ ದಾರಿಯಲ್ಲಿ ಮುನ್ನಡೆಸಿದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಮೃದು ಹೃದಯದ ನಗು ಮೊಗದ ಇವರು ಸಮಾಜ ಸೇವೆಯಲ್ಲಿ ಹಿಂದೆ ಬಿದ್ದಿಲ್ಲ. ಬಡವರ ಮೇಲೆ ಅಪಾರ ಅನುಕಂಪ. ಸಮಾಜ ಸೇವೆಗೆ ಮಾರ್ಗ ಕಂಡುಕೊಳ್ಳಲು ಪುತ್ತೂರಿನ ರೋಟರ್ಯಾಕ್ಟ್ ಮತ್ತು ಲಿಯೋಕ್ಲಬ್‌ಗಳ ಸದಸ್ಯರಾಗಿದ್ದಾರೆ, ಪ್ರತಿಭೆಯನ್ನು ಗುರುತಿಸಿ ಮುಲ್ಕಿ ಮತ್ತು ಪುತ್ತೂರಿನ ಸಂಘ ಸಂಸ್ಥೆಗಳು ಸನ್ಮಾನಿಸಿದವು. ಸಹೋದರ ಶ್ರೀಬಿ.ಕೆ. ಶ್ರೀಧರ ಪುತ್ತೂರಿನ ವಿವೇಕಾನಂದ ಕಾನೂನು ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದಾರೆ.

ಶ್ರೀಯುತರ ತಂದೆ ಶ್ರೀ ಬಿ. ಆರ್. ಕುಂಞಪ್ಪ, ತಾಯಿ ಶ್ರೀಮತಿ ಹೇಮ ಮತ್ತು ಕಿರಿಯ ಸಹೋದರ ಶ್ರೀ ಬಿ. ಕೆ. ಶ್ರೀಧರರವರುಗಳೊಂದಿಗೆ ಇದ್ದಾರೆ. ಸ್ಥಳೀಯ ರೋಟರ್ಯಾಕ್ ಮತ್ತು ಲಿಯೋ ಕ್ಲಬ್‌ಗಳ ಸಕ್ರೀಯ ಸದಸ್ಯ ಕೂಡ ಆಗಿರುತ್ತಾರೆ.

● ಚಿದಾನಂದ ಬೈಲಾಡಿ
ನ್ಯಾಯವಾದಿ, ಪುತ್ತೂರು.

ಭಾಗಮಂಡಲ ನಾಡು ಗೌಡ ಸಮಾಜ ಕಲ್ಯಾಣ ಮಂಟಪದ ಕಿರುಪರಿಚಯ

ಭಾಗಮಂಡಲದಲ್ಲಿ ನಮ್ಮದೇ ಆದ ಕಲ್ಯಾಣ ಮಂಟಪ ಇಲ್ಲದ್ದರಿಂದ ಬುದ್ಧಿ ಶೀಲ ವಿದ್ಯಾವಂತರು, ಗಣ್ಯರು ಒಂದು ಕಲ್ಯಾಣ ಮಂಟಪ ಕಟ್ಟುವ ಉದ್ದೇಶ ದಿಂದ ತಾ|| 29-9-93 ರಂದು ಪ್ರಥಮ ಸಭೆಯನ್ನು ಕರೆದು ಶ್ರೀ ಕುದುಪಜೆ ಡಿ. ಬೈರಪ್ಪ (ನಿವೃತ್ತ ಅಸಿಸ್ಟೆಂಟ್ ಕಮಾಂಡೆಂಟ್ ಕರ್ನಾಟಕ ಕಾಯ್ದಿಟ್ಟ ಪೋಲಿಸ್ ಪಡೆ) ಅವರನ್ನು ಅಧ್ಯಕ್ಷರಾಗಿ ನೇಮಿಸಿ, ಇವರಿಗೆ ನೆರವಾಗಲು ಒಂದು ಸಮಿತಿಯನ್ನು ರಚಿಸಲಾಯಿತು. ನಂತರ ಗ್ರಾಮ ಸಭೆಗಳ ಮುಖಾಂತರ ಗ್ರಾಮದ ಜನರನ್ನು ಸಂಪರ್ಕಿಸಲಾಯಿತು. ಪ್ರೋತ್ಸಾಹವೂ ದೊರಕಿತ್ತು. ಕಲ್ಯಾಣ ಮಂಟಪದ ಸ್ಥಳವನ್ನು ದಿವಂಗತ ಶ್ರೀ ನಿಡ್ಯಮಲೆ ವೆಂಕಟರಮಣಗೌಡರಿಂದ ಅರ್ಧ ಎಕರೆ ಜಾಗವನ್ನು ರೂ. 25,000/– ರೂಪಾಯಿಗೆ ಪಡಕೊಂಡವು. ಈ ಮಧ್ಯ ಕೆ.ವಿ.ಜಿ. ಸ್ಥಾಪಕ ಅಧ್ಯಕ್ಷರು, ಧಾನಿಗಳು ಆದ ಶ್ರೀಮಾನ್ ಕುರುಂಜಿ ವೆಂಕಟರಮಣ ಗೌಡರು ಮಡಿಕೇರಿಯಲ್ಲಿ ಒಂದು ಸಭೆ ಯಲ್ಲಿ ಬಹಿರಂಗವಾಗಿ ನಮ್ಮ ಸಮಾಜದ ಕಲ್ಯಾಣಮಂಟಪಗಳಿಗೆ ಧನ ಸಹಾಯ ಮಾಡುವ ಭರವಸೆ ಘೋಷಿಸಿದರು. ಇದನ್ನು ಮನಗಂಡ ನಾವುಗಳು ಅವರನ್ನು ಖುದ್ದಾಗಿ ಸಂಪರ್ಕಿಸಿ, ಅವರ ಅಮೃತ ಹಸ್ತದಿಂದ ತಾ|| 10-5-1985ರಂದು ಶಂಕುಸ್ಥಾಪನೆ, ಗುದ್ದಲಿ ಪೂಜೆ ನೆರವೇರಿಸಿ 50,000ರೂ ಕೊಡುತ್ತೇನೆಂತ ವಾಗ್ದಾನ ವಿತ್ತು ರೂ. 25,000ಕ್ಕೆ ಚೆಕ್ಕು ನೀಡಿದ ಫಲ ಸಭೆಯಲ್ಲಿ ಜನರಿಂದ 1,25,000 ರೂ.ಗಳು ದೊರಕುವ ಭರವಸೆ ಸಿಕ್ಕಿತು. ಇದರಿಂದ ಆನೆ ನಡುಗೆಯಲ್ಲಿ ಇದ್ದ ಯೋಜನೆ ಚುರುಕುಗೊಂಡಿತು. ಹಣ ವಸೂಲಿ ಮಾಡುವಲ್ಲಿ ಜಾಗ ಸಮತಟ್ಟ ಮಾಡುವಲ್ಲಿ 2–3 ವರ್ಷಗಳು ಕಳೆದವು. ಶ್ರೀ ವೆಂಕಟರಮಣಗೌಡರು ದೇಣಿಗೆ ಕೊಟ್ಟ ಹಣ ಅಲ್ಲದೆ, ಅವರ ಸತತ ಪ್ರಯ ತ್ನದಿಂದ 30-1-85 ರಂದು ಬೆಂಗಳೂರಿ ನಿಂದ ಒಕ್ಕಲಿಗರ ಸಂಘದ ಅಧ್ಯಕ್ಷರು ಪದಾಧಿಕಾರಿಗಳನ್ನು ಭಾಗಮಂಡಲಕ್ಕೆ ಭೇಟಿ ಕೊಡಿಸಿ, ಸಭೆ ಕರೆಸಿ ಅವರಿಂದ 50,000 ರೂಪಾಯಿ ದೇಣಿಗೆ ಕೊಡಿಸಿದ ರು. ನಂತರ ಸುಳ್ಯದಲ್ಲಿ ತನ್ನ ಅಧೀನದಲ್ಲಿ ದ್ದ ಕೆಲಸದವರನ್ನು ಕಳುಹಿಸಿ 8 ತಿಂಗಳಲ್ಲಿ ಕಟ್ಟಡದ ಕೆಲಸವನ್ನು ಮುಗಿಸಿಕೊಟ್ಟು ದಾಖಲೆ ಸ್ಥಾಪಿಸಿದರು. ಈ ಅಲ್ಪ ಅವಧಿ ಯಲ್ಲಿ ಕಟ್ಟಡ ಕಟ್ಟಿ ಮುಗಿಸಿದ್ದು ಎಲ್ಲರಿ ಗೂ ಆಶ್ಚರ್ಯ ಉಂಟುಮಾಡಿತು. ತಾ|| 14-12-88 ರಂದು ಶ್ರೀ ಕಾವೇರಿ ಪುಣ್ಯ ಕ್ಷೇತ್ರದಲ್ಲಿ ಕಲ್ಯಾಣಮಂಟಪದ ಉದ್ಘಾ ಟನೆಯನ್ನು ಶ್ರೀ ಕುದುಪಜೆ ಬೈರಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಕುರುಂಜಿ ವೆಂಕಟರಮ ಣಗೌಡರ ಅಮೃತ ಹಸ್ತದಿಂದ ನಮಗೂ, ನಮ್ಮ ಮುಂದಿನ ಯುವ ಪೀಳಿಗೆಗೂ ಒಂದು ಭವ್ಯ ಕಟ್ಟಡ ಆಗಲೆಂದು ಆಶೀರ್ವ ದಿಸಿ ಪ್ರೋತ್ಸಾಹಿಸಿದರು. ಇದರಿಂದಾಗಿ ಭಾಗಮಂಡಲ ನಾಡಿನಲ್ಲಿ ಗೌಡ ಜನಾಂಗದ ವರು ತಲೆ ಎತ್ತಿ ನಿಲ್ಲುವಂತಾಗಿದೆ. ಎಂದು ಹೇಳಲು ಸಂತೋಷಪಡುತ್ತೇನೆ. ಈ ಕಲ್ಯಾಣ ಮಂಟಪದಲ್ಲಿ ಸಭೆಗಳು,ಮದುವೆ ಕಾರ್ಯಗಳು ನಡೆಯುತ್ತವೆ. ಕೆಲವು ಧಾನಿ ಗಳಿಂದಲೂ ಹಣ ಸಂಗ್ರಹಿಸಿ ವಿದ್ಯಾನಿಧಿ ಯನ್ನೂ ಸ್ಥಾಪಿಸಿ, ಭಾಗಮಂಡಲ ನಾಡಿನ ವ್ಯಾಪ್ತಿಗೆ ಒಳಪಟ್ಟ 1) ಪಿ.ಯು.ಸಿ. 2) ಎಸ್.ಎಸ್.ಎಲ್.ಸಿ. 3) 7ನೇ ತರಗ ಯಲ್ಲಿ ಪಾಸಾದ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ಮತ್ತು ಸರ್ಟಿಫಿ ಕೇಟ್ ನೀಡುತ್ತಿದ್ದೇನೆ. 1993–94ರಲ್ಲಿ ಶ್ರೀ ದಿವಂಗತ ನಿಡ್ಯಮಲೆ ಲಿಂಗಪ್ಪನವರು 2 ಸೆಂಟು ಜಾಗವನ್ನು ಧಾನವಾಗಿ ನೀಡಿದ ನಿಮಿತ್ತ 1 ಬಾವಿಯನ್ನು ತೋಡಿ ವಿದ್ಯುತ್ ಪಂಪು ಅಳವಡಿಸಿ ಸಮಾಜಕ್ಕೆ ನೀರಿನ ಅನುಕೂಲತೆಯನ್ನು ಕಲ್ಪಿಸಲಾ ಗಿದೆ. 2 ಸೆಂಟು ಜಾಗವನ್ನು ಧಾನವಾಗಿ ನೀಡಿದ ದಿ|| ಶ್ರೀ ನಿಡ್ಯಮಲೆ ಲಿಂಗಪ್ಪನವ ರನ್ನು ಸ್ಮರಿಸುತ್ತೇನೆ.

1995 ರಲ್ಲಿ ಕೆ. ವಿ. ಜಿ. (ಐ.ಟಿ.ಐ) ತಾಂತ್ರಿಕ ಶಿಕ್ಷಣ ಸಂಸ್ಥೆಯು ಭಾಗಮಂಡಲದಲ್ಲಿ ಪ್ರಾರಂಭವಾಯಿತು. ಶಿಕ್ಷಣ ಸಂಸ್ಥೆಯಲ್ಲಿ 80 ಬಡ ವಿದ್ಯಾರ್ಥಿ ಗಳು ವಿದ್ಯಾರ್ಜನೆ ಪಡೆಯುತ್ತಿದ್ದಾರೆ. ತಾಂತ್ರಿಕ ಕಟ್ಟಡ ನಿರ್ಮಾಣ ಹಂತದಲ್ಲಿದ್ದ ಕಾರಣ ಸಮಾಜದ ಕಟ್ಟಡದಲ್ಲಿ ತಾತ್ಕಾ ಲಿಕ ವ್ಯವಸ್ಥೆ ನಿರ್ವಹಿಸಲು ಬಿಟ್ಟುಕೊಡ ಲಾಗಿತ್ತು. ನಂತರ ಹೊಸ ಸ್ವಂತ ಕಟ್ಟಡಕ್ಕೆ ಕಳುಹಿಸಲಾಯಿತು.

ಇದೇ ಗೌಡ ಸಮಾಜದ ಒಂದು ಕೋಣೆಯಲ್ಲಿ ಈಗಾಗಲೇ ದಂತ ಚಿಕಿತ್ಸಾಲ ಯವನ್ನು ತೆರೆದು ಬಡಜನರಿಗೆ ಉಚಿತ ಚಿಕಿತ್ಸೆಯನ್ನು ಕೆ.ವಿ.ಜಿ. ಸಂಸ್ಥೆ ನಡೆಸು ತ್ತಿದೆ.

ಭಾಗಮಂಡಲ ಗೌಡ ಸಮಾಜ ಎಲ್ಲಾ ನಿಟ್ಟಿನಲ್ಲಿ ಒಂದು ಮಾದರಿ ಸಮಾಜ ಆಗಿ ಮುಂದುವರಿಯುತ್ತಿದೆ ಎಂದು ತಿಳಿಸಿ ಈ ಕಿರು ಪರಿಚಯವನ್ನು ಮುಕ್ತಾಯಗೊಳಿ ಸುತ್ತೇನೆ.

● **ಕುದುಪಜೆ ಡಿ. ಬೈರಪ್ಪ**
ಅಧ್ಯಕ್ಷರು,
ಗೌಡ ಸಮಾಜ, ಭಾಗಮಂಡಲ

ಕೊಡಗು ಸಂಗಾತಿ

ಕೊಂಡು ಓದಿರಿ

ಸಂಗಾತಿ ಬಿಡುಗಡೆ, ಸುಂದರ ಸಮಾರಂಭ

1997 ಏಪ್ರಿಲ್ 9ನೇ ದಿನ ಕೊಡಗು ಗೌಡರ ಪಾಲಿಗೆ ಸುದಿನ, ಯುಗಾದಿ ಕಳೆದು ಸರ್ವರ ಬಾಳಲ್ಲೂ ಹೊಸ ತನ ಮಾಡಿನ ಸಮಯ, ಅಂದು ಮೈಸೂರಿನ ಜಯಲಕ್ಷ್ಮಿಪುರಂ ನಲ್ಲಿರುವ ಕೊಡಗು ಗೌಡ ವಿದ್ಯಾರ್ಥಿನಿಲಯದಲ್ಲಿ ಗೌಡಜನರ ಸಮ್ಮಿಲನ. ಜಗದ ಕತ್ತಲನ್ನು ತೊಳೆಯುವ ಸೂರ್ಯನೋಪಾದಿಯಲ್ಲಿ, ಕೊಡಗು ಗೌಡ ಜನಮನದ ಅಂಧಕಾರದ ಕೊಳೆ ತೊಳೆಯಲು ಉದಯಿಸಿದ "ಕೊಡಗು ಸಂಗಾತಿ" ಪತ್ರಿಕೆಯ ಬಿಡುಗಡೆ ಸಮಾರಂಭ.

ಪೂಜೆಯ ಬಳಿಕ ಕಾರ್ಯಕ್ರಮ ಪ್ರಾರಂಭವಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಪಾಂಡನ ಸುಬ್ಬಯ್ಯನವರು ವಹಿಸಿದ್ದರು. ಪೈಕೇರ ಅನಂತರಾಮ್, ಮುಕ್ಕಾಟಿ ವಾಸುದೇವ್, ನೆಯ್ಯಣಿ ಕುಶಾಲಪ್ಪನವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕುಮಾರಿ ಅಮೆಮನೆ ಅರ್ಚನಾ ಮತ್ತು ಬಾಲಾಡಿ ಮೀರಾರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪತ್ರಿಕೆಯ ಗೌರವ ವ್ಯವಸ್ಥಾಪಕರಾದ ಪಟ್ಟಡ ಪ್ರಭಾಕರ್‌ರವರು ಸ್ವಾಗತ ಭಾಷಣ ಮಾಡಿ, ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಬಿಡಿಸಿ ಹೇಳಿದರು. ಸಮಾರಂಭವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಕೊಡಗು ಗೌಡ ಸಮಾಜದ ಕಾರ್ಯದರ್ಶಿಯಾಗಿರುವ ಪೈಕೇರ ಅನಂತರಾಮ್‌ರವರು, ಪತ್ರಿಕೆಯ ಬಿಡುಗಡೆ ಬಗೆಗೆ ಹರ್ಷ ವ್ಯಕ್ತಪಡಿಸಿ, ಪತ್ರಿಕೆ ಒಂದು ಸ್ಥಳದ ಒಂದು ಜನಾಂಗಕ್ಕೆ ಮೀಸಲಾಗಿರದೆ, ವಿಶಾಲ ವ್ಯಾಪ್ತಿಯನ್ನು ಒಳಗೊಂಡು ಹೊರಹೊಮ್ಮ ಬೇಕೆಂದು ಆಶಿಸಿದರು. ಪತ್ರಿಕೆ ಬಿಡುಗಡೆ ಮಾಡಿ ಸಭೆಯನ್ನುದ್ದೇಶಿಸಿ ಮಾತನಾಡಿದ ಮಡಿಕೇರಿ ಪುರಸಭೆಯ ಮಾಜಿ ಅಧ್ಯಕ್ಷರೂ, ಪ್ರಸಿದ್ಧ ವಕೀಲರು ಆದ ಮುಕ್ಕಾಟಿ ವಾಸುದೇವ್‌ರವರು ಗೌಡಕನ್ನಡದ ಪತ್ರಿಕೆಯ ಅಗತ್ಯತೆಯನ್ನು ಒತ್ತಿ ಹೇಳಿದರು. ಕೊಡಗಿನಲ್ಲಿ ಸುಮಾರು 11 ಪತ್ರಿಕೆಗಳು ಕಾರ್ಯಚಟುವಟಿಕೆ ಹೊಂದಿದ್ದರೂ, 'ಕೊಡಗು ಸಂಗಾತಿ' ಒಂದು ವಿಶಿಷ್ಟ ಪತ್ರಿಕೆಯಾಗಿ ಮೂಡಿ ಬರಲಿ ಎಂದು ನುಡಿದರು. ಮೈಸೂರು ಗೌಡ ವಿದ್ಯಾಸಂಘ (ಶಾಖೆ) ಮೈಸೂರು ಇದರ ಅಧ್ಯಕ್ಷರಾಗಿರುವ ನೆಯ್ಯಣಿ ಕುಶಾಲಪ್ಪನವರು, ಪತ್ರಿಕೆಯ ಯಶಸ್ಸಿಗೆ ತಮ್ಮ ಪೂರ್ಣ ಸಹಕಾರ ಮತ್ತು ಪ್ರೋತ್ಸಾಹವನ್ನು ವ್ಯಕ್ತಪಡಿಸಿದರು. ಸಭೆಯನ್ನುದ್ದೇಶಿಸಿ ಸಮಾರಂಭದ ಅಧ್ಯಕ್ಷರೂ, ವಯೋವೃದ್ಧರು ಮಾಜಿ ಶಾಸಕರೂ ಆದ ಪಾಂಡನ ಸುಬ್ಬಯ್ಯನವರು ಮಾತನಾಡಿ ಪತ್ರಿಕೆಯು ಯುವ ಜನಾಂಗವನ್ನು ಸಂಘಟಿಸಿ ಅವರಿಗೆ ಉತ್ತಮ ಮಾರ್ಗದರ್ಶನ ನೀಡುವಂತಾಗಲಿ ಎಂದು ಹಾರೈಸಿದರು.

ಸಭಿಕರಲ್ಲಿ ಹಲವು ಜನ ಪತ್ರಿಕೆಯ ಬಗ್ಗೆ ಸಲಹೆ ನೀಡಿದರು. ಸೂಜಿ ಪತ್ರಿಕೆಯ ಮಾಜಿ ಸಂಪಾದಕರಾದ ಅಮೆಮನೆ ಪಾಲಾಕ್ಷರವರು ಮಾತನಾಡಿ, ಪತ್ರಿಕಾ ರಂಗಕ್ಕೆ ಹಲವು ಜನ ಕೈಹಾಕಿ ಕೈಸುಟ್ಟುಕೊಂಡಿರುವುದಾಗಿಯೂ, ನಮ್ಮ ಜನಾಂಗದಲ್ಲಿ ಪ್ರೋತ್ಸಾಹಕರ ಸಂಖ್ಯೆ ಬಹು ಕಡಿಮೆ ಎಂದೂ, ಪ್ರತಿಯೊಂದು ಮನೆಗೊಂದರಂತೆ ಪತ್ರಿಕೆಯನ್ನು ಜನ ಕೊಂಡು ಓದಿದಾಗ ಮಾತ್ರ ಪತ್ರಿಕೆ ಬೆಳವಣಿಗೆಯಾಗುತ್ತದೆಂದು ಸಲಹೆ ಮಾಡಿದರು. ಬೆಂಗಳೂರಿನಲ್ಲಿ ಕೊಡಗು ಗೌಡ ಯೂತ್ ಅಸೋಸಿಯೇಟ್ಸ್ ಸಂಘಟನೆಯ ನೇತಾರರಾದ ಮುಂಡೋಡಿ ಮಾದಪ್ಪ, ಕೂಡಕಂಡಿ ಅಶೋಕ್‌ರವರು ತಮ್ಮ ಮನದಾಳದ ಅನಿಸಿಕೆಗಳನ್ನು ಹೊರಗೆಡವಿದರು. "ಕೊಡಗು ಸಂಗಾತಿ" ಪತ್ರಿಕಾ ಬಳಗದ ಉಪ ಸಂಪಾದಕ ಕಟ್ರತನ ಜಯರಾಂರವರು ವಂದನಾರ್ಪಣೆ ಮಾಡಿದಾಗ ಸುಂದರ, ಸರಳ ಸಮಾರಂಭ ತೆರೆಕಂಡಿತು.

ಸಂಪಾದಕಿ ಪಟ್ಟಡ ಶೀಲಾಮಣಿ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿದರೆ, ಪಟ್ಟಡ ಶಿವಕುಮಾರ್ ತಮ್ಮದೇ ಧಾಟಿಯಲ್ಲಿ ಕಾರ್ಯಕ್ರಮ ನಿರೂಪಿಸಿದರು.

– ನೀತಿ –


ಮನುಷ್ಯನಿಗೆ ಅಹಂಕಾರವಿದ್ದರೆ ಪರವಾಗಿಲ್ಲ.
ಆದರೆ ದುರಾಹಾಂಕಾರ ಇರಬಾರದು.

"ಕೊಡಗು ಸಂಗಾತಿ" ನಿಮ್ಮ ಮಗು ಇದನ್ನು ಬೆಳೆಸಿ ಪೋಷಿಸಬೇಕೆಂದು ಪತ್ರಿಕಾ ವ್ಯವಸ್ಥಾಪಕ ಬಳಗ ಬೇಡಿಕೊಳ್ಳುತ್ತದೆ....

ಅನುಭವ

ಅಷ್ಟು ಜನರ ಕೂಟದಲ್ಲಿ,
ಆಯಿತು ಎಲ್ಲರ ಊಟ
ಎನಗೂ ಇತ್ತು ರಸದೂಟ
ಆಗ ಕಂಡಾಗ ಅವಳ
ಓರೆ ಕಣ್ಣಿನ ನೋಟ
ನೋಡಲು ಮತ್ತೊಮ್ಮೆ
ನನ್ನ ಮನಸು ಪರದಾಟ

ಓದೊ ಪಾಠ ಬಿಟ್ಟು
ನೋಡಲವಳ ಕುಣಿದಾಟ
ನಿನ್ನ ಬಯಸುವ ಹಠ
ನಿನ್ನನ್ನೆ ಹುಡುಕಾಟ
ಸೋತಾಗ ಪರೀಕ್ಷೆಯಲ್ಲಿ
ದುಃಖದಲ್ಲಿ ಸಂಕಟ
ತೋರದಿರು ನಿನ್ನ ನೋಟ
ನಿನ್ನಿಂದ್ಲೆ ಸ್ಫೋಟ
ಈ ನನ್ನ ಪಾಠ



ಕೂಡಕಂಡಿ ಉತ್ತಯ್ಯ ಅಶೋಕ್
ರವರಿಂದ
ಬೆಂಗಳೂರು.

ದೇಶ ಪ್ರೇಮಿ

ಸುಳ್ಯಾದ ರಾಮೇಗೌಡ

ಯುಗದಲ್ಲಿ ನಡೆದ ಕುರುಕ್ಷೇತ್ರ
ಸುಳ್ಯಾದ ರಾಮೇಗೌಡರ ಪಾತ್ರ
ಸಿಡಿದೆದ್ದು ನಿಂತ ಯತ್ನ
ಸ್ವಾತಂತ್ರ್ಯಗಳಿಸಲು ಜಯಭೇರಿ
ಸದೆಬಡಿದರು ಕೆಲವರ
ಪಡೆದರು ವೀರ ಕೇಸರಿ
ನಾಡಿನ ರಕ್ಷಣೆಯ ಹಾದಿಗೆ
ಹೋರಾಡಿದರು ಹಲವಾರು ಬಾರಿ
ದೇವೈಕ್ಯವಾದರು ಗಲ್ಲಿಗೇರಿ,
ಮಡಿಕೇರಿಯು ಈ ದೇಶಪ್ರೇಮಿಯನ್ನು
ಆಗಾಗ ಸಾರಿ....

ಬನ್ನಿರಿ ಕೊಡಗಿನ ವೀರ ಪುತ್ರರೇ

ಬನ್ನಿ ಬನ್ನಿ ಕೊಡಗಿನ ವೀರ ಪುತ್ರರೇ ।
ತಾಯಿ ನಾಡಿಗಾಗಿ ದುಡಿವ ವೀರ ಯೋಧರೆ ॥
ಕೊಡಗು ನಾಡಲ್ಲೆ ಜಯಭೇರಿಯ ಮೊಳಗಿಸುವಾ ।
ಕಾವೇರಮ್ಮೆಯ ಪಾದ ಸೇವೆ ನಮಗೆಂದು ಬೇಡುವಾ ॥
ಕೊಡಗಿನ ಹಿರಿಮೆಯನ್ನು ದಶದಿಕ್ಕಿಗೂ ಹಬ್ಬಿಸುವಾ ॥

ಕೊಡಗಿನ ಅರೆ ಭಾಷೆಯು ಕಸ್ತೂರಿಯಂತೆ ।
ಕೊಡಗಿನ ನಾಡಿದುವೇ ನಂದನ ವನವಂತೆ ॥
ಕೊಡಗಿನವರ ಹೃದಯದಲ್ಲಿ ಕರುಣೆ ಬಹಳವಂತೆ ।
ಕೊಡಗಿನ ನಾಡಿದುವೇ ವನಸಿರಿಯ ತೌರಂತೆ ॥

ಹಾಲೇರಿ ವಂಶದ ಜಂಗಮ ಮುದ್ದುರಾಜ ದೊರೆಯಾದರು ।
ಕೊಡಗು ನಾಡಿನ ಏಕತೆಗೆ ಮೂಲ ಕಾರಣರಾದರು ॥
ದೊಡ್ಡವೀರಪ್ಪ, ವೀರರಾಜೇಂದ್ರ, ಲಿಂಗರಾಜ ಒಡೆಯರು ।
ಕೊಡಗು ನಾಡಿನ ರಕ್ಷಣೆಗಾಗಿ ಎದೆ ತಟ್ಟಿ ನಿಂತರು ॥

ಗುಡ್ಡೆಮನೆ ಅಪ್ಪಯ್ಯನು, ಕೆದಂಬಾಡಿ ರಾಮನು ।
ಉತ್ತು, ಕರ್ತಕುಡಿಯ, ತಕ್ಕಮುಕ್ಕಾಟಿಯರು ಹೋರಾಡಿದರು ॥
ಆಂಗ್ಲ ಸಾಮ್ರಾಜ್ಯದ ಪತನದ ಕನಸು ಕಂಡರು ।
ಕ್ರಾಂತಿಕಾರರು ಸಿಂಹಸ್ವಪ್ನರಾಗಿ ವೀರಸ್ವರ್ಗ ಪಡೆದರು ॥

ಕೊಡಗಿನ ಕೆಲವರು ಆಂಗ್ಲರ ವೇಶಕ್ಕೆ ಮಾರುಹೋದರು ।
ಮಾರುಹೋಗಿ ಅವರ ದಾಸ್ಯಕ್ಕೆ ಬಲಿಯಾದರು ॥
ಬಲಿಯಾಗಿ ಕೊಡಗನ್ನ ಅರ್ಪಿಸಿ, ಕ್ರಾಂತಿಕಾರರನ್ನು ಹಿಡಿದುಕೊಟ್ಟರು ।
ಕೊಡಗನ್ನು ಗುಲಾಮಗಿರಿಗೆ ತಳ್ಳಿ ಖುಷಿಪಟ್ಟರು ॥

ಉಂಬಳಿ, ಜಮ್ಮ ಭೂಮಿ ಲಿಂಗರಾಜ ಕೊಟ್ಟನು ।
ಕೊಟ್ಟ ಭೂಮಿ ಪರಮಾನ್ನವೆಂದು ತಿಳಿದನು ॥
ಸ್ವಂತಿಕೆಗೆ ತನುಮನವ ಅರ್ಪಿಸಿ ಕಷ್ಟಪಟ್ಟು ದುಡಿದನು ।
ಮುಂದಿನ ಏಳಿಗೆಯ ವಿಶ್ವ ಹಿಂದೂಗಾಗಿ, ದುಡಿಯುತ್ತಿಹರು ॥

ಮೆರೆದು ಜನರು ದೇಶಸೇವೆ ಮಾಡುತಿಹರು ।
ಧೀರ ವೀರ ಸೇನಾನಿ ಕಾರ್ಯಪ್ಪ, ತಿಮ್ಮಯ್ಯ ಕೀರ್ತಿ ತಂದರು ॥
ನಮ್ಮ ನಾಡಿಗೆ, ಕೊಡಗು ನಾಡಿಗೆ ಮರೆಯದಿರವರನ್ನ ಎಂದುನೀ ।
ಬನ್ನಿ ಬನ್ನಿ ಕೊಡಗಿನ ವೀರ ಪುತ್ರರೇ, ವೀರ ಪುತ್ರರೇ ॥ವೀರ ಪುತ್ರರೇ॥

ಕೃಪೆ : "ನನ್ನ ಕನಸಿನ ಮಡಿಕೇರಿ"
ರಚನೆ : ಶ್ರೀ ಪಟ್ಟಡ ಪ್ರಭಾಕರ
1994ರಲ್ಲಿ ಬಿಡುಗಡೆಗೊಂಡಾಗ

ಉದಯಿಸಲಿ ಯುವಶಕ್ತಿ

ಉದಯಿಸಲಿ ಉದಯಿಸಲಿ
ಯುವ ಶಕ್ತಿಯ ಚೇತನ
ಯುವಶಕ್ತಿ ಬೆಳೆಯುತಿರಲಿ
ಯುವಕರಲ್ಲಿ ಅನುದಿನ

ಮೇಲುಕೀಳು ಎಂಬ ಭೇದ
ಮನಸ್ಸಿನಿಂದ ತೆಗೆದಿಡಿ
ಒಂದೆ ತಾಯ ಮಕ್ಕಳೆಂಬ
ಮಮತೆಯನ್ನು ಮುಂದಿಡಿ

ಏರುತ್ತಿರಲಿ ಹಾರುತ್ತಿರಲಿ
ಯುವ ಶಕ್ತಿಯ ಬಾವುಟ
ಬನ್ನಿ ಬನ್ನಿ ಗೆಳೆಯರೆಲ್ಲ
ಹಾರಿಸುವ ಈ ಪಟ

ಕೊಡಗು ಸಂಗಾತಿ ಪತ್ರಿಕೆ
ಕೀರ್ತಿ ಶಿಖರ ಏರಲಿ
ಹಸಿರು ಮನದ ಸಿರಿಯ ನಡುವೆ
ನಗುನಗುತಾ ಬಾಳಲಿ

● ಕರ್ಣೇಯ್ಯನ ಎಂ. ಕಾಳಪ್ಪ

ಯುವಕರ ಬೆನ್ನೆಲುಬಾಗಿ ನಿಲ್ಲಬಲ್ಲ – ನೆಯ್ಯೇಣ್ಣಿರ ನಂಜಪ್ಪ ಕುಶಾಲಪ್ಪ


ಪೋಲೀಸ್ ಇಲಾಖೆಗೆ ತನ್ನ ಯೌವನವನ್ನು ಸಮರ್ಪಿಸಿದ ದೃಢ ನಿಲುವಿನ ನೆಯ್ಯೇಣ್ಣಿರನಂಜಪ್ಪ ಕುಶಾಲಪ್ಪ ಯುವ ಪ್ರತಿಭೆಯನ್ನು ತಕ್ಷಣ ಗುರುತಿಸಬಲ್ಲ ನೈಪುಣ್ಯತೆ ಹೊಂದಿದ್ದು ಯುವಕರ ಬೆನ್ನೆಲುಬಾಗಿ ನಿಲ್ಲಬಲ್ಲರು ಎಂಬುದರಲ್ಲಿ ಎರಡು ಮಾತಿಲ್ಲ. ಒಂದು ದಿನ ಬೆಳಗಿನ ಮುಸುಕಿನಲ್ಲಿ ಸುಂದರ ವಾತಾವರಣದಲ್ಲಿ "ಸಂಗಾತಿ" ಅವರನ್ನು ಸ್ವಲ್ಪ ಕೆಣಕಿದಾಗ ಅವರ ಅರ್ಥವತ್ತಾದ ಕೆಲವು ಮಾತುಗಳನ್ನು ಮುಂದಿಡುತ್ತಿದ್ದೇವೆ.

ಕೊಡಗು ಸಂಗಾತಿ : ನಿಮ್ಮ ತಂದೆ ತಾಯಿ ಪರಿಚಯ ಹೇಳಿ, ನಿಮಗೆ ಅವರ ಮಾರ್ಗದರ್ಶನವಿತ್ತೇ ?

ಉತ್ತರ : ಕೊಡಗಿನ ಹಳೆ ತಲೆಗಳಲ್ಲಿ ಒಬ್ಬರಾದ ತಂದೆ ನೆಯ್ಯೇಣ್ಣಿರ ನಂಜಪ್ಪ ತಾಯಿ ಪೂವಮ್ಮ. ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ದುಃಖ ಬೆನ್ನಿಗೆ ಅಂಟಿಕೊಂಡಿತ್ತು. ತಂದೆ ಆಗಿನ ಕಾಫಿ, ಏಲಕ್ಕಿಯಲ್ಲಿ ಮುಂದುವರೆದ ಬೆಳೆಗಾರರಾಗಿ ಗ್ರಾಮದ ನ್ಯಾಯ ಪಂಚಾಯಿತಿಯ ಮುಖ್ಯಸ್ಥರಾಗಿ, ಸಂಘ ಸಂಸ್ಥೆಗಳಲ್ಲಿ ದುಡಿದ ಅನುಭವ. ರಕ್ತಸಂಬಂಧವೆಂಬಂತೆ ಕುಶಾಲಪ್ಪನವರಿಗೂ ಬೆನ್ನಿಗೆ ಅಂಟಿಕೊಂಡು ಬಂದಿರುವ ಸಮಾಜ ಸೇವೆ ಇವತ್ತಿಗೂ ಕಾಣುತ್ತಿದೆ. ನಂತರ ತಂದೆಯವರನ್ನು ಸಹ ಕಳೆದುಬೇಕಾಯಿತ್ತು.

ಸಂಗಾತಿ : ನಿಮ್ಮ ಹುಟ್ಟೂರು, ನಿಮ್ಮ ಊರಿನ ಹಿರಿಮೆ ಪ್ರಖ್ಯಾತಿ ಇದೆಯೇ ? ವಿದ್ಯಾಭ್ಯಾಸ ಎಲ್ಲೆಲ್ಲಿ ಮುಗಿಸಿದ್ದೀರಿ ?

ಉ : ಭಾಗಮಂಡಲನಾಡು ಕಡಿಯತ್ತೂರಿನಲ್ಲಿ ಶ್ರೀ ಭಗವತಿ ದೇವರ ದೇವಾಲಯವಿರುವ ಗ್ರಾಮದಲ್ಲಿ 15-5-1936ರಲ್ಲಿ ಜನಿಸಿದೆ. ಹೆಚ್ಚು ಪ್ರಖ್ಯಾತಿನ್ನು ಗ್ರಾಮ ಹೊಂದಿರದಿದ್ದರೂ, ಸಹ ನನ್ನ ವಿದ್ಯಾಭ್ಯಾಸವನ್ನು ಕೊಟ್ಟೂರು ಪ್ರಾಥಮಿಕ ಸ್ಕೂಲ್‌ನಲ್ಲಿ ಪ್ರಾರಂಭಿಸಿ, ನಾಪೋಕ್ಲುವಿನಲ್ಲಿ ಹೈಸ್ಕೂಲ್‌ನ್ನು, ಪಿ.ಯು.ಸಿ.ಯನ್ನು ಮಡಿಕೇರಿ ಸರ್ಕಾರಿ ಕಾಲೇಜಿನಲ್ಲಿ ಮುಗಿಸಿ ನನ್ನ ಓದಿಗೆ ಇತಿಶ್ರೀ ಹಾಡಿದೆ. ಕ್ರೀಡೆಗಳಲ್ಲಿ ಹೆಚ್ಚಿನ ಆಸಕ್ತಿ ಇತ್ತು.



ಶ್ರೀ ನೆಯ್ಯೇಣ್ಣೀರ ಕುಶಾಲಪ್ಪ

ಸಂಗಾತಿ : ಸರಕಾರಿ ಹುದ್ದೆಗೆ ಎಲ್ಲಿಂದ ಪಾದಾರ್ಪಣೆಯಾಯಿತ್ತು ?

ಉ : ನನ್ನ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ "ಕೊಡಗಿನ ಜೇನು" ಎಂದು ಪ್ರಖ್ಯಾತಿಯಾದ ಜೇನು ಕೃಷಿಯ ಸ್ಥಳ ಭಾಗಮಂಡಲದಲ್ಲಿ ಕೆಲವು ಸಮಯ ಉದ್ಯೋಗಿಯಾಗಿ, ಅನಂತರ ಸ್ವಲ್ಪ ಸಮಯ ಅಧ್ಯಾಪಕನಾಗಿ ಸೇವೆ ಸಲ್ಲಿಸಿ ನಂತರ ಪೊಲೀಸ್ ಇಲಾಖೆಗೆ ದುಮುಕಿದೆ. ಇಲ್ಲಿ ಸುಮಾರು 35 ವರ್ಷಗಳ ಸೇವೆ ಸಲ್ಲಿಸಿ ಸೀನಿಯರ್ ಸಬ್ ಇನ್‌ಸ್ಪೆಕ್ಟರ್ ಆಗಿ ಹಾಸನ, ಮೈಸೂರಿನ ಸಂದರ ನಗರಗಳಲ್ಲಿ ಪ್ರದಕ್ಷಿಣೆ ಹಾಕಿಕೊಂಡು ಜನರ ಸೇವೆಯನ್ನು ಮಾಡುತ್ತಾ ನಿವೃತ್ತಿ ಹೊಂದಿದ್ದೇನೆ.

ಕಟ್ರತನ ಜಯರಾಂ 'ಸಂಗಾತಿ' ಪತ್ರಿಕೆಯ ಉಪ ಸಂಪಾದಕರು. ಇವರು ಶ್ರೀ ನೆಯ್ಯೇಣ್ಣೀರ ಕುಶಾಲಪ್ಪನವರನ್ನು ಸಂದರ್ಶನ ಮಾಡಿದಾಗ ಹೊರಬಂದ ಅಭಿಪ್ರಾಯ, ಅನುಭವಗಳನ್ನು ತಮ್ಮ ಮುಂದಿಡುತ್ತಿದ್ದೇವೆ.

–ಸಂ.

ಸಂಗಾತಿ : ನಿಮ್ಮ ಸರಕಾರಿ ಹುದ್ದೆ ನಿಮಗೆ ತೃಪ್ತಿ ತಂದಿತೆ ?

ಉ : ಪೊಲೀಸ್ ಇಲಾಖೆಯಲ್ಲಿ ಸಂಪೂರ್ಣ ತೃಪ್ತಿಯನ್ನು ಹೊಂದಿ, ಇಂದು ಅದೇ ಹುಮ್ಮಸ್ಸಿನಿಂದ ಸಮಾಜ ಸೇವೆಯಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದೇನೆ.

ಸಂಗಾತಿ : ನೀವು ಈ ಮೊದಲು ಸಂಘ ಸಂಸ್ಥೆಯ ಚಟುವಟಿಕೆಯಲ್ಲಿ ತೊಡಗಿದ್ದೀರಾ ? ಅವು ಯಾವುವು ?

ಉ : ಈ ಮೊದಲು ಹಾಸನದ ಕೊಡಗು ಗೌಡ ಸಮಾಜದಲ್ಲಿ (1982-83) ಅಧ್ಯಕ್ಷನಾಗಿ ನಂತರ ಮೈಸೂರಿನಲ್ಲಿ ಸಕ್ರಿಯ ಸದಸ್ಯನಾಗಿ, ನಿರ್ದೇಶಕನಾಗಿ ನಂತರದ ಕಾಲದಲ್ಲಿ ಮೈಸೂರಿನ ಕೊಡಗು ಗೌಡ ವಿದ್ಯಾರ್ಥಿ ನಿಲಯಕ್ಕೆ ಅಧ್ಯಕ್ಷರು ಬೇಕಾದ ಸಂದರ್ಭದಲ್ಲಿ ನನ್ನನ್ನು ಈ ಸಂಘದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ಇದೇ ನಿಟ್ಟಿನಲ್ಲಿ ನನ್ನ ಅಧಿಕಾರದ ಹಬ್ಬ ಹರಿದಿನಗಳಲ್ಲಿ, ಜನರನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿದ್ದೇನೆ. ಇದಕ್ಕೆ ನಮ್ಮ ಸರ್ವರ ಸಹಕಾರಬೇಕೆಂದು ಮತ್ತೊಮ್ಮೆ ಕೋರಿಕೊಳ್ಳುತ್ತೇನೆ. ಸಂಘದ ಏಳಿಗೆಗೆ ತನು, ಮನ, ಧನ ಸಹಾಯ

ಮಾಡಿರುವುದುಂಟು.

ಸಂಗಾತಿ : ನಿಮ್ಮ ಸುಖಮಯ ಸಂಸಾರದಲ್ಲಿ ಎಷ್ಟು ವಸಂತಗಳನ್ನು ಕಂಡಿದ್ದೀರಿ ? ನಿಮಗೆ ಎಷ್ಟು ಮಕ್ಕಳು ? ಮಕ್ಕಳ ಭವಿಷ್ಯಕ್ಕೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ?

ಉ : 33 ವರ್ಷಗಳ ಸಂತೋಷದ ವಸಂತಗಳನ್ನು ಕಂಡ ನಾನು ದೇವರದಯೆಯಿಂದ ಸಂತುಷ್ಟ. ಒಬ್ಬನೇ ಕುಲಪುತ್ರ ರಮೇಶ್ B.Sc. ಮುಗಿಸಿ ವಕೀಲ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿರುವ ಮಗ, ಪತ್ನಿ ಲೀಲಾವತಿ ಸಂಘ ಸಂಸ್ಥೆಗಾಗಿ ದುಡಿಯುತ್ತಿದ್ದಾರೆ. ಪತಿಯ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಜೀವನವನ್ನು ಅರ್ಥಮಾಡಿಕೊಂಡಿರುವ ಸಂಸಾರ. ಅಧ್ಯಾಪಕಿ ಸೊಸೆಯ ಒಡನಾಡಿನಲ್ಲಿ ಮೈಸೂರಿನ ವಿಜಯನಗರದಲ್ಲಿ ನೆಲೆಸಿದ್ದೇನೆ. ಸಂಘ ಸಂಸ್ಥೆಗಳಲ್ಲಿ ದುಡಿಯುವುದರಲ್ಲಿ ನೆಮ್ಮದಿ ಕಂಡ ನಾನು ಮಗನ ಭವಿಷ್ಯಕ್ಕಾಗಿ ಏನೇನು ಮಾಡಲಿಲ್ಲ ಎಂಬ ಕೊರಗಿದೆ. ನನ್ನ ಸಂಸಾರದಲ್ಲಿ ಕೇವಲ 2 ದಿನದ ಅಂತರದಲ್ಲಿ 5 ವರ್ಷದ ಗಂಡು ಮಗು ಹಾಗೂ ಒಂದು ಹೆಣ್ಣು ಮಗುವನ್ನು ಕಳೆದುಕೊಂಡ ಕಹಿ ಅನುಭವ.

ಸಂಗಾತಿ : ಇಷ್ಟೆಲ್ಲಾ ಆದರೂ ಮೈಸೂರಿನ ಗೌಡ ವಿದ್ಯಾರ್ಥಿ ನಿಲಯದ ಅಪೂರ್ಣಗೊಂಡ ಕಟ್ಟಡ ಮತ್ತು ದುರಸ್ಥಿ ಕಾರ್ಯಗಳಿಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ ?

ಉ : ಇಂದು ನಮ್ಮ ಜನರಲ್ಲಿ ಹಣವಿದ್ದರೂ ಉದಾರ ನೀತಿ ಏಕೋ ಎದ್ದು ಕಾಣುತ್ತಿಲ್ಲ. ಕಟ್ಟಡ ಕಟ್ಟಲು ಯಾರಾದರು ಮುಂದೆ ಬಂದಲ್ಲಿ ಅವರೊಡಗೂಡಿ ಸಹಕರಿಸಲು ನಾನು ಸದಾ ಸಿದ್ಧ. ಕೆಲವು ದುರಸ್ಥಿ ಕಾರ್ಯಕ್ಕಾಗಿ ಸಂಘದ ವತಿಯಿಂದ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಸದ್ಯದಲ್ಲೇ ದುರಸ್ಥಿ ಕಾರ್ಯ ನಡೆಯಲಿದೆ. ಇದಕ್ಕೆಲ್ಲ ಸಹಕರಿಸಲು ನಾನು ಯುವಶಕ್ತಿಯನ್ನು ಸಹ ನಂಬಿರುತ್ತೇನೆ.

ಸಂಗಾತಿ : ನೀವು ಇಂದು ಯುವಕರ ಮನಸ್ಸನ್ನು ಗೆದ್ದಿದ್ದೀರಿ ಎಂಬ ಅನಿಸಿಕೆ "ಸಂಗಾತಿ"ಯದು. ಈ ಯುವಕರ ಏಳಿಗೆಗೆ ನೀವು ಏನು ಕ್ರಮ ಕೈಗೊಂಡಿದ್ದೀರಿ ?

ಉ : ಯುವಕರೇ ದೇಶದ ಬೆನ್ನೆಲುಬು. ಅವರು ತಾವಾಗಿಯೆ ಮುಂದೆ ಬರಬೇಕು. ಹಿರಿಯರ ಅನುಭವ ಅವರ ಸಹಕಾರವನ್ನು ಪಡೆದು ಮಾರ್ಗದರ್ಶನವನ್ನು ಉಪಯೋಗಿಸಿಕೊಂಡು ಮುಂದಡಿಯಿಡಲು ಬಯಸಿದರೆ ಅದಕ್ಕೆ ನನ್ನ ಸಂಪೂರ್ಣ ಸಹಕಾರವನ್ನು ಕೊಡಲು ಸಿದ್ಧ.

(ಸಧ್ಯಕ್ಕೆ ಯುವಕರ ಏಳಿಗೆಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ ಎಂಬುದು ಅವರಲ್ಲಿ ವ್ಯಕ್ತವಾಗುತ್ತಿತ್ತು. ಹಾಗೆ ಸಂಘಕ್ಕಾಗಿ ಮತ್ತೊಂದು ನಿವೇಶನವನ್ನು ಮಾಡಿ ಅದರಿಂದ ಜನಾಂಗಕ್ಕೆ ಹಿತಬಯಸುವ ಅಭಿಪ್ರಾಯವಿತ್ತು)

ಎಣ್ಣೆಗೆಂಪು, ಬೆಳ್ಳಿ ಮೀಸೆಯ ಬಲಿಷ್ಟ ದೇಹದಾರ್ಢ್ಯತೆಯನ್ನು ಹೊಂದಿರುವ ಸುಂದರ ವ್ಯಕ್ತಿಯಾಗಿ ಹರಳು ಹುರಿದಂತೆ ಮಾತನಾಡುವ ಶ್ರೀ ನೆಯ್ಯಣ್ಣೀರ ಕುಶಾಲಪ್ಪ ಹಣಕಾಸಿನಲ್ಲಿ ಶ್ರೀಮಂತರಲ್ಲದಿದ್ದರೂ ಹೃದಯವಂತಿಕೆಯಲ್ಲಿ ತುಂಬು ಶ್ರೀಮಂತಿಕೆಯನ್ನು ಹೊಂದಿದ್ದಾರೆ. ಇವರ ಮಗ ಮತ್ತು ಧರ್ಮ ಪತ್ನಿಯವರ ಬೆಳಗಿನ ಉಪಹಾರದೊಂದಿಗೆ ನಮ್ಮನ್ನು ಕೊಡಗಿನ ಸಂಪ್ರದಾಯದಂತೆ ಮನೆ ಗೇಟಿನವರೆಗೆ ನಗುಮುಖದೊಂದಿಗೆ ಬೀಳ್ಕೊಟ್ಟ ಇವರಿಗೆ 'ಕೊಡಗು ಸಂಗಾತಿ'ಯ ನಮನಗಳು.

ಕ್ರಿಕೆಟ್ ಯಾವಾಗ ಆರಂಭವಾಯಿತು ?

ಕ್ರಿಕೆಟ್ ಆಟ ಆರಂಭವಾಗಿ ಸುಮಾರು 600 ವರ್ಷಗಳಾಗಿರಬಹುದೆಂದು ಕ್ರೀಡಾರಂಗ ಸಂಶೋಧನಾಕಾರರು ಅಭಿಪ್ರಾಯ ಪಟ್ಟಿದ್ದಾರೆ. ಕೆಲವು ವರ್ಷಗಳ ತರುವಾಯ ಕ್ರಿಕೆಟ್ ಆಟದ ನಿಯಮಗಳನ್ನು ರೂಪಿಸಲಾಯಿತು. ವಿಶ್ವದ ಮೊಟ್ಟಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ನಡುವೆ ಮೆಲ್ಬರ್ನ್‌ನಲ್ಲಿ ನಡೆಯಿತು. ಈ ಟೆಸ್ಟ್‌ಪಂದ್ಯ 1877ರ ಮಾರ್ಚ್ 15 ರಿಂದ 17 ರ ವರೆಗೆ ನಡೆಯಿತು. ಆಸ್ಟ್ರೇಲಿಯಾ ಈ ಪಂದ್ಯವನ್ನು 45 ರನ್‌ಗಳಿಂದ ಗೆದ್ದಿತು. ಆದರೆ, ಅದೇ ಸ್ಥಳದಲ್ಲಿ ನಡೆದ ಎರಡನೇ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಸೋಲು ಅನುಭವಿಸಿತು.

ಇಂದು ಕ್ರಿಕೆಟ್ ಆಟ ವಿಶ್ವದಾದ್ಯಂತ ಜನರಲ್ಲಿ ತುಂಬ ಆಸಕ್ತಿಯನ್ನುಂಟುಮಾಡಿದೆ. ಟೆಸ್ಟ್‌ಪಂದ್ಯಗಳಿಗೆ ಟಿಕೇಟ್ ದೊರೆಯುವುದೇ ಕಷ್ಟ. ರೇಡಿಯೋ ಮತ್ತು ಟೆಲಿವಿಷನ್‌ಗಳಲ್ಲಿ ಪಂದ್ಯಗಳ ವೀಕ್ಷಕ ವಿವರಣೆ ಪ್ರಸಾರವಾಗುತ್ತದೆ. ಭಾರತ 1983ನೇ ವರ್ಷದ ವಿಶ್ವ ಕ್ರಿಕೆಟ್ ಕಪ್ ನ್ನು ಗೆದ್ದು, ಮೊದಲ ಸ್ಥಾನದಲ್ಲಿತ್ತು.

● ಹುಲಿಮನೆ ಓ ರಮೇಶ

ಅರೆಭಾಷೆಯ ಬಗೆಗಿರಬೇಕಾದ ಅಭಿಮಾನ

ಫೆಬ್ರವರಿ 14 ಗೌಡ ಜನಾಂಗಕ್ಕೊಂದು ಸಂಭ್ರಮದ ದಿನ. ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲಾ ಗೌಡ ಸಮಾಜದ ಬಾಂಧವರು ಸುಳ್ಯಾದ ಕೆ.ವಿ.ಜಿ. ವಿದ್ಯಾ ನಗರದಲ್ಲಿ ಸಮಾವೇಶಗೊಳ್ಳುವುದೆಂದು ನಮ್ಮ ಸಮಾಜದ ಗಣ್ಯರು ಒಂದೆಡೆ ಸೇರಿ ಈಗಾಗಲೇ ಸಿದ್ಧತೆಯನ್ನು ನಡೆಸಿದ್ದಾರೆ. ಈ ಸಮ್ಮೇಳನ ಇಂದು ದ್ವಿತೀಯ ಬಾರಿಗೆ ಒಂದೇ ಸ್ಥಳದಲ್ಲಿ ಸೇರುತ್ತಿರುವುದು ಸಂತಸದ ವಿಷಯ ಎರಡೂ ಜಿಲ್ಲೆಗಳಿಗೆ ಕೇಂದ್ರವಾಗಿ ಸುಳ್ಯವನ್ನೇ ಆಯ್ದುಕೊಳ್ಳಲು ಕಾರಣವಿಲ್ಲದೆ ಇಲ್ಲ.

ಕೆಲವು ದಿನಗಳ ಹಿಂದೆ ವಿಶ್ವ ಮಟ್ಟದ ಕೊಂಕಣಿ ಸಮ್ಮೇಳನವು ಯಶಸ್ವಿಯಾಗಿ ದಕ್ಷಿಣ ಕನ್ನಡದಲ್ಲಿ ಜರುಗಿತು. ರಾಷ್ಟ್ರದ ಕೇಂದ್ರ ಬಿಂದುವಾಗಿ ದ. ಕ. ಜಿಲ್ಲೆಯನ್ನು ಆಯ್ದುಕೊಳ್ಳಲು ಮಣಿಪಾಲದ ಪೈ ಕುಟುಂಬ ಸಮಾಜಕ್ಕಾಗಿ ಶ್ರಮಿಸುತ್ತಿರುವ ಮುಂಚೂಣಿಯಲ್ಲಿರುವುದೇ ಕಾರಣ. ಅದೇ ರೀತಿ ಸುಳ್ಯದ ಈ ಮಲೆನಾಡ ತಪ್ಪಲಲ್ಲಿ ಸಮ್ಮೇಳನವು ಜರುಗಲು ನಮ್ಮ ಸಮಾಜದ ಗಣ್ಯ, ಶಿಕ್ಷಣ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಗೈದಿರುವ ಅಮರ ಸುಳ್ಯದ ಶಿಲ್ಪಿ ಶ್ರೀಯುತ ಕುರಂಜಿ ವೆಂಕಟ್ರಮಣ ಕಾರಣ.

ಇಂದು ನಮ್ಮ ಸಮಾಜದಲ್ಲಿ ಆರ್ಥಿಕವಾಗಿ ಮುಂದುವರಿದವರಿಗೆ ಕೊರತೆಯಿಲ್ಲ. ಆದರೆ ಆರ್ಥಿಕತೆಯ ಒಂದಂಶವನ್ನು ಸಮಾಜಕ್ಕಾಗಿ ವಿನಿಯೋಗಿಸುವವರ ಕೊರತೆ ಇದ್ದೇ ಇದೆ. ಆದರೂ ಈಗ ಎರಡು ಜಿಲ್ಲೆಯ ಸಮಾಜ ಭಾಂಧವರು ಒಟ್ಟು ಸೇರಿ ನಮ್ಮ ಜನಾಂಗ ಯಾರಿಗೂ, ಯಾವ ಕ್ಷೇತ್ರದಲ್ಲಿಯೂ ಕಡಿಮೆಯಿಲ್ಲ ಎಂದು ತೋರ್ಪಡಿಸುವುದರ ಜೊತೆಗೆ, ಜನಾಂಗದ ಹಿಂದುಳಿದವರನ್ನು ಮುಖ್ಯ ವಾಹಿನಿಯಲ್ಲಿ ಕೊಂಡೊಯ್ದು ಅವರಿಗೂ ಸಮಾಜದ ಒಗ್ಗಟ್ಟಿನ ಪ್ರತಿಫಲವನ್ನು ದೊರಕಿಸಿ ಕೊಡುವಂತಾದರೆ ಸಮ್ಮೇಳನದ ಉದ್ದೇಶ ಈಡೇರಿದಂತೆ ಸರಿ. ಒಗ್ಗಟ್ಟಿಲ್ಲದ ಯಾವುದೇ ಸಮಾಜ, ಯಾವುದೇ ಕ್ಷೇತ್ರದಲ್ಲಿ ಮುಂದುವರೆಯಲು ಸಾಧ್ಯವಿಲ್ಲ. ರಾಜಕೀಯವಾಗಿ ಯಾವುದೇ ಪಕ್ಷದಿಂದಾಗಲೀ ಸಮಾಜದ ಗಣ್ಯರು ಮುಂದೆ ಹೋದಾಗ ಕಾಲು ಹಿಡಿದು ಎಳೆಯುವುದನ್ನು ಬಿಟ್ಟು ಭೇದ ಮರೆತು ನಮ್ಮ ಜನಾಂಗ ಅವರನ್ನೂ ಪ್ರೋತ್ಸಾಹಿಸುವುದೂ ಅಗತ್ಯವಿದೆ. ಬದಲಾದ ಸನ್ನಿವೇಶದಲ್ಲಿ ಎಲ್ಲಿ ಹೋದರೂ ಮೀಸಲಾತಿಯೆ ಪ್ರಧಾನವಾಗಿ ಮೂಡಿ ಬರುತ್ತಿರುವ ಈ ಸಂಧಿ ಕಾಲದಲ್ಲಿ ಅದನ್ನು ಪ್ರಬಲವಾಗಿ ಎದುರಿಸಿ ಸಮಾಜ ಬಾಂಧವರನ್ನು ಒಂದುಗೂಡಿಸಿ, ನಮಗೆ ವಿರುದ್ಧವಾದಂತಹ ಯಾವುದೇ ಕ್ರಮವನ್ನು ದಿಟ್ಟತನದಿಂದ ಪ್ರತಿಭಟಿಸಿ ನಮ್ಮ ಸಮಾಜಕ್ಕೆ ದೊರೆಯುವ ಮನ್ನಣೆಯನ್ನು ಪಡೆಯಲು ಒಗ್ಗಟೇ ಮುಖ್ಯವಾಗಿದೆ.

ನಮ್ಮ ಸಮಾಜವು ಒಗ್ಗಟ್ಟಾಗಬೇಕಾದರೆ ನಮ್ಮ ಜನಾಂಗದ ಸಂಸ್ಕೃತಿ, ಕಲೆ, ಭಾಷೆ ಜನ ಪದಗಳು ಉಳಿಯಬೇಕಾದರೆ, ನಾವು ಎಚ್ಚೆತ್ತುಕೊಳ್ಳಬೇಕಾದ ಅವಶ್ಯಕತೆಯಿದೆ. ಇಂದು ಅಂತಹ ಒಂದು ಕೊರತೆ ಎದ್ದು ಕಾಣುತ್ತಿದೆ. ಅದೇನೆಂದರೆ ನಮ್ಮ ಗೌಡ ಜನಾಂಗದ "ಮಾತೃಭಾಷೆಯ ಬಗ್ಗೆ ಅವಗಣನೆ ಸಲ್ಲದು" ಸಮಾಜ ಬಾಂಧವರು ಹೆಮ್ಮೆ ಪಡಬೇಕಾದ ಅಂಶವೆಂದರೆ ನಮ್ಮ ಭಾಷೆಗಾಗಿ ಇನ್ನು ಯಾರೂ ಹಕ್ಕು ಸ್ಥಾಪಿಸಲಾರರು. ಆದರೆ ಭಾಷಾಭಿಮಾನದ ಕೊರತೆ ಎದ್ದು ಕಾಣುತ್ತಿರುವುದು ನಮ್ಮ ದೌರ್ಬಲ್ಯವಾಗಿದೆ. ರಾಜ್ಯ ಮಟ್ಟದಲ್ಲಿಯೇ ಹೇಳುವುದಾದರೆ ಗೌಡರು ಕನ್ನಡ, ತುಳು, ಅರೆಭಾಷೆ ಹೀಗೆ ಹಲವು ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಅದೂ ತಪ್ಪಲ್ಲ. ಕನ್ನಡವನ್ನು ಮೂಲದಿಂದಲೆ ಮಾತನಾಡುತ್ತಿರುವವರು ಅಂತೆಯೇ ತುಳುವನ್ನೆ ಮೂಲ ಭಾಷೆಯಾಗಿ ಅಳವಡಿಸುವವರನ್ನು ತಪ್ಪು ಎನ್ನಲಾಗದು. ಆದರೆ ಅರೆ ಕನ್ನಡವನ್ನು ಕಲಿಯಬಲ್ಲವರು ಸ್ವಇಚ್ಛೆಯಿಂದ ಕಲಿತರೆ ಶುಭಸೂಚನೆಯಾದೀತು. ಹೆಚ್ಚಾಗಿ ದ.ಕ. ಹಾಗೂ ಕೊಡಗು ಜಿಲ್ಲೆಗಳಲ್ಲಿ ಅರೆಭಾಷೆ ಗೌಡರುಗಳದ್ದೇ ಪ್ರಾಬಲ್ಯ. ಇಂದು ಏನಾಗಿದೆ ಎಂದರೆ ಸಮಾಜದ ಅಲ್ಪ ಸ್ವಲ್ಪ ಸುಶಿಕ್ಷಿತರೆ ಪರಭಾಷೆಯ ಬಗ್ಗೆ ವ್ಯಾಮೋಹ ಹೊಂದಿರುವುದು ನಮ್ಮ ಸಮಾಜದ ದುರಂತವೇ ಸರಿ. ತಮ್ಮ ಸ್ವಂತ ಮನೆಯಲ್ಲಿ ಅರೆಭಾಷೆ ಮಾತನಾಡುತ್ತಿರುವವರು ತಮ್ಮ ಮಕ್ಕಳ ಜೊತೆ ಕನ್ನಡವನ್ನೇ ಬಳಸುತ್ತಿದ್ದಾರೆ. ಇದನ್ನು ಜನ ಅರಿಯದೇ ಹೋದರೆ ಅಂತಹವರಿಂದ ನಮ್ಮ ಸಮಾಜ ನಿರೀಕ್ಷಿಸುವುದಾದರೂ ಏನು ? ಜಾತಿ ಬೇಕೋ? ಬೇಕೆಂದಾದರೆ ಅಷ್ಟೇ ಮುಖ್ಯವಾಗಿ ಭಾಷೆಯೂ ಬೇಕೆ ಬೇಕು. ಉದಾಹರಣೆಗೆ ಮಡಿವಾಳರೂ, ಕ್ಷೌರಿಕರು, ಬೈರರು, ಹೀಗೆ ಹಲವಾರು ಜಾತಿಯವರು ಕನ್ನಡವನ್ನೇ ಬಳಸುತ್ತಾರೆ. ಆದರೆ ಇದು ನಮ್ಮ ಮಾತೃಭಾಷೆ ಎನ್ನುವಂತಹ ಧೈರ್ಯ ಅವರಾರಿಗೂ ಇಲ್ಲ ಆ ಭಾಷೆ ನಮ್ಮದು, ನಮ್ಮದು ಎಂದು ಹಲವಾರು ಸಮುದಾಯದವರು ಪೈಪೋಟಿ ನಡೆಸಬಹುದು ಇದಕ್ಕೆ ವಿರುದ್ಧವಾಗಿ ಅರೆ ಭಾಷೆ ಗೌಡರಿಗೆ ಇಂತಹ ಸಮಸ್ಯೆಗಳಿಲ್ಲ. ನಮ್ಮ ಭಾಷೆಗೆ ಇನ್ಯಾರು ಪಾಲುದಾರರಲ್ಲ.

ಭಾಷೆಯ ಪ್ರಾಮುಖ್ಯತೆಯ ಬಗ್ಗೆ ಇತ್ತೀಚೆಗೆ ನಡೆದ ವಿಶ್ವ ಕೊಂಕಣಿ ಸಮ್ಮೇಳನದಲ್ಲಿ ಹೆಚ್ಚು ಚರ್ಚಿಸಲ್ಪಟ್ಟಿದೆ ಅವರೂ ಪ್ರಾಮುಖ್ಯತೆಯನ್ನು ಕೊಟ್ಟದ್ದು ಇಡೀ

ಸಮೇಳನದಲ್ಲಿ ಭಾಷೆಯ ಬಗ್ಗೆ. ಭಾಷೆ ಉಳಿದರೆ ಒಗ್ಗಟ್ಟು ಉಳಿಯುತ್ತದೆ. ಆದೇ ಸಮ್ಮೇಳನದಲ್ಲಿ ಡಾ|| ಸೂರ್ಯನಾಥ ಕಾಮತ್ ಎನ್ನುವವರು ಹಿಂದೆ ನೆಪೋಲಿಯನ್ ಆಡಿದಂತಹ ಒಂದು ಮಾತನ್ನು ನೆನಪಿಗೆ ತಂದರು.

ಇದು ಅಕ್ಷರಶಃ ಸತ್ಯ. ಅದಕ್ಕಾಗಿ ಈ ನಮ್ಮ ಸಮ್ಮೇಳನವು ಆ ಭಾಷೆಯ ಬಗ್ಗೆ ಹೆಚ್ಚು ಮಹತ್ವ ಕಲ್ಪಿಸುವ ಅವಶ್ಯಕತೆಯಿದೆ. ಅರೆಭಾಷೆಯಿಂದಲೇ ಹಲವು ಜನಪದಗಳು ಹುಟ್ಟಿಕೊಂಡಿವೆ. ಅವೆಲ್ಲವನ್ನು ಉಳಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯ. ನಮ್ಮ ಸಮಾಜದ ಆಸುಪಾಸಿನಲ್ಲಿರುವ ಕೊಂಕಣಿಗರಾಗಲಿ, ಬಾಹ್ಮಣರಾಗಲಿ, ಅಥವಾ ಕೊಡವರು ಅವರದೇ ಆದ ಭಾಷೆಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದ್ದಾರೆ. ಇದಕ್ಕಾಗಿ ಅವರನ್ನು ಅಭಿನಂದಿಸಬೇಕು. ನಮ್ಮ ಸಮಾಜ ಬಾಂಧವರು ಬಹು ಸಂಖ್ಯೆಯಲ್ಲಿರುವ ಕೊಡಗಿನಲ್ಲಿಯೂ ಇದೇ ಪರಿಸ್ಥಿತಿಯಿದೆ. ಒಂದು ಸಭೆಯೋ ಅಥವಾ ಸಮಾರಂಭವೋ ಇರಲಿ. ನಾಲ್ಕು ಜನ ನಮ್ಮ ಜನಾಂಗದವರು ಸೇರಿದ್ದಲ್ಲಿ ಒಬ್ಬ ಕೊಡವ ಸಮಾಜದ ವ್ಯಕ್ತಿ ಇದ್ದರೆ ಅಲ್ಲಿ ನಮ್ಮ ಜನ ಕೊಡುವ ಭಾಷೆಯನ್ನಾಡುತ್ತಾರೆ. ಹಾಗೆಯೇ ಆ ವ್ಯಕ್ತಿ ಅವರ ಭಾಷೆಯನ್ನು ಬಿಟ್ಟು ಇನ್ನೊಂದು ಭಾಷೆಯನ್ನು ಬಳಸುವುದೇ ಇಲ್ಲ. ಇಂತಹ ವಿಷಯಗಳನ್ನು ನಮ್ಮ ಸಮಾಜ ಬಾಂಧವರು ಅರತು ಅದರ ಬಗ್ಗೆ ಮುಂದಾಲೋಚನೆಯನ್ನು ಹರಿಸಿದರೆ ನಮ್ಮ ಸಮಾಜವು ಮುಂದುವರಿಯುವುದರಲ್ಲಿ ಅನುಮಾನವಿಲ್ಲ

ಸಮ್ಮೇಳನವು ಕೇವಲ ಒಂದು ದಿನದ ಜಾತ್ರೆಯ ವಾತಾವರಣವನ್ನು ಉಂಟು ಮಾಡಿದರೆ ಅದರಿಂದೇನೂ ಪ್ರಯೋಜನವಾಗದು. ಬದಲಾಗಿ ಪ್ರತಿಯೊಬ್ಬರೂ ಈ ಸಮ್ಮೇಳನದ ಉದ್ದೇಶವೆ ಸಮಾಜಕ್ಕಾಗಿ ನಮ್ಮ ಕೊಡುಗೆಯೇನು ಎಂಬುದರ ಬಗ್ಗೆ ವಿಮರ್ಶಿಸಿದರೆ ಅದು ಅರ್ಥಪೂರ್ಣವಾದೀತು. ದ.ಕ. ಹಾಗೂ ಕೊಡಗು ಜಿಲ್ಲಾ ಸಮಾಜ ಬಾಂಧವರು ಹೆಚ್ಚಾಗಿ ಕೃಷಿಕರಾಗಿಯೇ ಇರುವುದರಿಂದ ರೈತಾಪಿ ವರ್ಗದಿಂದಲೇ ಬಂದವರಿರುವುದರಿಂದ ಭಾಷೆಯ ಉಳಿವಿಗಾಗಿ ಹೋರಾಡಲು ನಮಗೆ ಕಷ್ಟವಾಗಲಾರದು. ಇನ್ನು ಮುಂದಿನ ಪೀಳಿಗೆಗೆ ಈಗಿನ ಯುವ ಪೀಳಿಗೆಯು ಆದರ್ಶ ಮಾರ್ಗದರ್ಶನವನ್ನು ಹಾಕಿ ಕೊಟ್ಟರೆ ಅದರಿಂದ ಸಮಾಜದ ಮುಂದಿನ ಉನ್ನತಿಗೆ ಅದೊಂದು ದಾರಿ ದೀಪವಾದೀತು. ಈ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಮುಂದವರಿದದ್ದೇ ಆದರೆ, ಭಾಷೆಗೂ, ನಮ್ಮ ಜನಾಂಗಕ್ಕೂ ಒಳಿತಾಗುವುದರ ಜೊತೆಗೆ ನಮ್ಮ ಮೂಲ ಗೌಡರ ಸಂಸ್ಕೃತಿ, ಜನಪದ ಕಲೆಗಳು ಉಳಿಯುವಂತಾಗುತ್ತದೆ. ಅದಕ್ಕಾಗಿ ಹಾರೈಸೋಣ.

● ಯತಿರಾಜ ಭೂತಕಲ್ಲು
ಆಲೆಟ್ಟಿ, ಸುಳ್ಯ, ದ.ಕ.

ಕರಡಿಗೋಡು ಗ್ರಾಮದ ಕುಕ್ಕನೂರು ಕುಟುಂಬಸ್ಥರ ಶ್ರೀ ಬಸವೇಶ್ವರ ದೇವರ ಚರಿತ್ರೆ

ಕುಕ್ಕನೂರು ಕುಟುಂಬಸ್ತರ ಪೂರ್ವಿಕರು 1832ರ ಇಸವಿಯಲ್ಲಿ ಶ್ರೀ ಬಸವೇಶ್ವರ ದೇವರ ದೇವಸ್ಥಾನವನ್ನು ಸ್ಥಾಪಿಸಿದರೆಂದು ತಿಳಿಯಲಾಗಿದೆ, ಈ ದೇವರನ್ನು ಯಾರು ಮನಪೂರ್ವಕವಾಗಿ ಶುದ್ಧಿಯಿಂದ ಪೂಜಿಸುವುದರಿಂದ ಇಸ್ವಾರ್ಥ ಸಿದ್ದಿಸುವುದರಲ್ಲಿ ಎರಡು ಮಾತಿಲ್ಲವೆಂದು ನಂಬಲಾಗಿದೆ. ಇಲ್ಲಿನ ವೈಶಿಷ್ಟವೆಂದರೆ ದೇವರಿಂದ ಹೂ ತೆಗೆಸುವ ಪದ್ಧತಿ. ಒಳ್ಳೆಯದೇ ಕೆಟ್ಟದ್ದೆ ಎಂದು. ಒಳ್ಳೆಯದಾದರೆ ಬಸವಣ್ಣನ ತಲೆಯಿಂದ ಮುಂದುಗಡೆ ಅಥವಾ ಬಲಭಾಗಕ್ಕೆ ಹೂ ಬೀಳುವುದು. ಎಡಭಾಗದ ಅಥವಾ ಹಿಂಭಾಕ್ಕೆ ಹೂವು ಬಿದ್ದರೆ ಕೆಟ್ಟದೆಂದು ನಂಬಲಾಗುವುದು.

ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ಪೂಜೆ ನಡೆಯುತ್ತದೆ. ಅದರಲ್ಲೂ ವಿಶೇಷ ಸೋಮವಾರದಂದು ಪೂಜಾರಿಯವರು ಈ ಕುಟುಂಬದ ಪ್ರತಿ ಒಂದುಮನೆಗೂ ತೆರಳಿ ಹೂ ಹಣ್ಣುಕಾಯಿ ತರುವುದು. ಬೆಳಿಗ್ಗೆ 10–30 ಗಂಟೆಗೆ ಪೂಜೆ ನಡೆಯುವುದು. ಆ ಪೂಜೆಗೆ ಕುಟುಂಬಸ್ತರು, ಊರಿನವರು ಸೇರುವರು. ಪೂಜೆ, ಪ್ರಸಾದ ನೈವೇದ್ಯ, ಪಂಚಾಮೃತ, ಹಣ್ಣುಕಾಯಿ ಇತ್ಯಾದಿಯನ್ನು ಪೂಜಾರಿಯರು ಪ್ರತಿಯೊಂದು ಮನೆಗೆ ಹೋಗಿ ಕೊಟ್ಟು ಬರುವರು. ಸೋಮವಾರದಂದು ಕುಟುಂಬಸ್ತರು ಯಾರು ಮದ್ಯ, ಮಾಂಸ, ನಿಶಾಸೇವನೆ ಉಪಯೋಗಿಸುವಂತಿಲ್ಲ.

ಒಂದು ವರ್ಷ ಕಳಸ ಪೂಜೆಯಾದರೆ, ಎರಡನೇ ವರ್ಷ ದೊಡ್ಡ ಪೂಜೆ ಆಗುವುದು ಪೂಜೆಗೆ ಒಂದು ವಾರ ಮುಂಚೆ ಬಾಳೆಗೊನೆ ಕಡಿಯುವುದು, ಅಂದಿನಿಂದ ಮುಂದಿನ ಸೋಮವಾರ, ಮಂಗಳವಾರ ಹಬ್ಬ ನಡೆಯುತ್ತದೆ.

ಈ ಹಬ್ಬದ ಖರ್ಚು ವೆಚ್ಚಗಳನ್ನು ಈ ಕುಟುಂಬಸ್ತರೆ ಭರಿಸುವರು. ಭಕ್ತಾದಿಗಳು ಭಂಡಾರಕ್ಕೆ ಕಾಣಿಕೆ ಸಲ್ಲಿಸುತ್ತಾರೆ. ದೊಡ್ಡ ಹಬ್ಬದಲ್ಲಿ ಸೇರಿದ ಸಮಸ್ತ ಭಕ್ತಾದಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಇದೆ. ಇತರ ದೇವಸ್ಥಾನದವರು ಬಂದಾಗ ವಿಶೇಷ ಸಹಕಾರವನ್ನು ಕೊಡಲಾಗುವುದು ದೊಡ್ಡ ಹಬ್ಬದ ಸಂದರ್ಭದಲ್ಲಿ ಕುಟುಂಬಸ್ತರು ಅಲ್ಲದೆ ಹೊರಗಿನ ಎಲ್ಲಾ ಇತರ ಭಾಂಧವರು ಭಕ್ತಾದಿಗಳಾಗಿ ಭಾಗವಹಿಸ್ಸಿ ಸುಮಾರು 2000 ದಿಂದ 3000 ಜನರಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ.

ಪೂಜಾರಿಯವರಿಗೆ ವರ್ಷದ ಖರ್ಚಿಂದು 24 ಭಟ್ಟೆ 30 ಸೇರು ಭತ್ತ ಕೊಡುತ್ತಲಿದ್ದು, ಹಬ್ಬದ ಮೂರ ದಿನಗಳಲ್ಲಿ ಪೂಜಾರಿಯವರ ಮನೆಗೆ ಬರುವ ನೆಂಟರಿಷ್ಟರು ಬಂಧುಗಳ ಇನ್ನಿತರ ಎಲ್ಲಾ ಜನಂಗದವರ ಊಟದ ವ್ಯವಸ್ಥೆಯನ್ನು ಸಹ ಈ ಕುಟುಂಬದವರೆ ನೋಡಿಕೊಳ್ಳುತ್ತಾರೆ.

ಕುಕ್ಕನೂರು ಕುಟುಂಬಸ್ತರ ಮನೆ ಸಂಘದ ಸದಸ್ಯರಲ್ಲಿ ಕಾರ್ಯದರ್ಶಿ ಖಜಾಂಚಿ ಎಂದು 6ಜನರ ಸಹ ಕೂಟದಲ್ಲಿ ಶ್ರೀ ಕೆ.ಕೆ. ಚಂದ್ರಶೇಖರ್‌ರವರು ಅಧ್ಯಕ್ಷರಾಗಿರುವ ಈ ಕುಟುಂಬಕ್ಕೆ ಪಟ್ಟೆದಾರರಾಗಿ ಕೆ.ಎಸ್. ಉತ್ತಯ್ಯನವರು ಇದ್ದು ತಕ್ಕರಾಗಿ ಕೆ. ಪಿ. ಬಾಲಕೃಷ್ಣನವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ರೀತಿ ವರ್ಷಂಪ್ರತಿ ದೇವರ ಕಾರ್ಯ ಮುಂದುವರಿದು ಬಂದಂತಹ ಆದಾಯದಲ್ಲಿ ಉತ್ತಮ ಸಮಾಜ ಸೇವಾ ಕಾರ್ಯಕ್ರಮವನ್ನು ಹಮ್ಮಿಕೊಂಡಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸಿ ಶ್ರೀ ಬಸವೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಲಿ.

– ಉತ್ಸವ –

ಶ್ರೀ ಬಸವೇಶ್ವರ ದೇವರ ಉತ್ಸವವು 1997ರ ಅತೀ ವಿಜೃಂಭಣೆಯಿಂದ ಜರುಗಿತು. ತಾ|| 20–4–97ರ ಆದಿತ್ಯವಾರ ದಿನ ಸಾಯಂಕಾಲ 8 ಘಂಟೆಗೆ ತಕ್ಕರ ಮನೆಯಿಂದ ಭಂಡಾರ ಇಳಿಸುವುದರೊಂದಿಗೆ ಉಲ್ಲಾಸದ ಡೋಲು, ಓಲಗದ ಹರ್ಷಚಿತ್ತ ಕಾರ್ಯಕ್ರಮದೊಂದಿಗೆ ತಾ|| 21ನೇ ಸೋಮವಾರ ದಿನ ಬೆಳಿಗ್ಗೆ 9 ಗಂಟೆಯಿಂದ ಗಂಗಾ ಸ್ನಾನ ಕಳಸ ಪೂಜೆ. ಹೊಳೆಯಿಂದ ಶ್ರೀ ಬಸವೇಶ್ವರ ದೇವರ ಮೆರವಣಿಗೆ, ಮ. 3 ಗಂಟೆಗೆ ಶ್ರೀ ಬಸವೇಶ್ವರ ದೇವರ ಮನೆಮೆರವಣಿಗೆ ಜರುಗಿತು.

ತಾ|| 22 ರಂದು ಮಂಗಳವಾರ ಬೆಳಿಗ್ಗೆ 9ಕ್ಕೆ ಗಂಗಾ ಸ್ನಾನ, ಗಂಗೆ ಪೂಜೆ, ಶ್ರೀ ಬಸವೇಶ್ವರ ದೇವರ ಮೆರವಣಿಗೆ, ಕೊಂಡ ಹಾಯುವುದು, ಮಹಾಪೂಜೆ, ನೆರೆದಿದ್ದ ಸುಮಾರು 3000 ಜನರ ತನು ಮನ ತಣಿಸಿತು. ಕೊನೆಗೆ ಹರಿಕೆ ಒಪ್ಪಿಸುವ ಕಾರ್ಯ ಕ್ರಮದೊಂದಿಗೆ ಉತ್ಸವ ಮುಕ್ತಾಯಗೊಂಡಿತು.

● ಕೆ.ಡಿ. ಭೋಜಪ್ಪ

ಇದು ನಿಮ್ಮ ಪತ್ರಿಕೆ. "ಸಂಗಾತಿ" ಯನ್ನು ಬೆಳೆಸುವುದು, ಬೀಳಿಸುವುದು ನಿಮ್ಮಲ್ಲಿದೆ. ಬೆಲೆ ಸ್ವಲ್ಪ ಹೆಚ್ಚಾಯಿತು ಎಂಬ ಕೊರಗು ನಿಮ್ಮಲ್ಲಿದೆ. ಜಾಹೀರಾತು ಅಥವಾ ಇನ್ನಿತರ ಮೂಲಗಳಿಂದ ಬಂಡವಾಳದ ಕೊರತೆ ನಮಗಿದೆ. ಈಗಿನ ಬೆಲೆಯಲ್ಲಿ ಒಂದು ಪತ್ರಿಕೆ ನಡೆಸುವುದು ದುಸ್ತರ. ತಮ್ಮ ಉದಾರ ಮನಸ್ಸಿನಿಂದ ಬಳಗಕ್ಕೆ ಊರುಗೋಲಾಗಿ ಸಹಕರಿಸುತ್ತೀರಿ ಎಂಬ ನಂಬಿಗೆ ಇದೆ.

— "ಸಂಗಾತಿ" ಬಳಗ

— ನಿಮ್ಮ ಪತ್ರಗಳು —

ಶ್ರೀಮತಿ ಶೀಲಾಮಣಿರವರಿಗೆ,

ನಿಮ್ಮ "ಕೊಡಗು ಸಂಗಾತಿ" ಪಾಕ್ಷಿಕ ಪತ್ರಿಕೆ ತಲುಪಿತು. ಇದಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಈ ಸಂದರ್ಭದಲ್ಲಿ ನಾನು ಎಲ್ಲಾ ಯಶಸ್ಸನ್ನು ಕೋರುತ್ತೇನೆ. ದೇವರು, ನೀವು ಹೇಳಿರುವ ಉದ್ದೇಶಗಳನ್ನೆಲ್ಲಾ ಪರಿಪಾಲಿಸಿಕೊಂಡು ಈ ಪತ್ರಿಕೆ ಜನಪ್ರಿಯವಾಗುವಂತೆ ದೇವರಲ್ಲಿ ಪ್ರಾರ್ಥಿಸಿ, ಶುಭ ಹಾರೈತ್ತೇನೆ. ಪ್ರಸ್ತುತ ಸಮಾಜದಲ್ಲಿರುವ ಲಂಚದ ಪಿಡುಗು, ವರದಕ್ಷಿಣೆ ಪಿಡುಗು, ಕೋಮು-ಗಲಭೆ, ಸ್ತ್ರೀಯರು ಮತ್ತು ಅಬಲೆಯರ ಮೇಲೆ ಆಗುತ್ತಿರುವ ದೌರ್ಜನ್ಯ ಇದನ್ನೆಲ್ಲಾ ಪ್ರತಿಭಟಿಸಿ ಇಂತಹ ಹೀನ ಮತ್ತು ಮಾನವೀಯತೆಗೆ ಅಪಮಾನ ತರುವಂತ ಕೆಲಸದಲ್ಲಿ ತೊಡಗಿರುವವರನ್ನು ಗುರುತಿಸಿ ಇಂತಹ ಘಟನೆಗಳನ್ನು ಸಾಮಾನ್ಯ ಜನರಿಗೆ ಅರಿವಾಗುವಂತೆ ನಿರ್ಭಿತಿಯಿಂದ ಯಾವುದೇ ರಾಗ-ದ್ವೇಷ, ಅಸೂಯೆಗೆ ಎಡೆಕೊಡದೆ ವಿಮರ್ಶೆ ಮತ್ತು ಟೀಕೆ ಮಾಡಿ, ಇಂತಹ ಸಮಾಜ ಘಾತುಕ, ಅನ್ಯಾಯದ ವ್ಯವಹಾರಗಳನ್ನು ಬಯಲಿಗೆಳೆದು ಈ ತರಹದ ಘಟನೆಗಳು ಆದಷ್ಟು ಕಮ್ಮಿಮಾಡುವ ನಿಟ್ಟಿನಲ್ಲಿ ನಿಮ್ಮ ಪತ್ರಿಕೆ ಶ್ರಮಿಸಲಿ. ಈ ನಿಟ್ಟಿನಲ್ಲಿ ಕೆಲಸ ಮಾಡಲು ಕೊಡಗಿನ ಕಾವೇರಿ ಮಾತೆಯು ನಿಮಗೆ ಎಲ್ಲಾದಿಶೆಯಲ್ಲಿ ಸಹಾಯ ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ಪತ್ರಿಕೆಗೆ ಎಲ್ಲಾ ಶುಭ ಮತ್ತು ಯಶಸ್ಸನ್ನು ಕೋರಿ ಮತ್ತೊಮ್ಮೆ ನಿಮ್ಮ ಪ್ರಯತ್ನಕ್ಕೆ ನನ್ನ ಹೃತ್ಪೂರ್ವಕ ವಂದನೆಗಳು.

ನಿಮ್ಮ ಆತ್ಮೀಯ,

ಚೊಟ್ಟೆಕೋರಿಯಂಡ ಕೆ. ಬಾಲಕೃಷ್ಣ

ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರು, ಧಾರವಾಡ

The Editor,

Inaguration of 'Kodagu Sangathi' News Paper on 9-4-97 at 9 a.m. Thanks for the invitation and " Wish the function a grand success'.

We appriciate you, for the bold step taken by you to bring out and news magazine under the name 'Kodagu Sangathi' which will uplift the living standard of our community in the rural parts of Kodagu and other districts.

Further our Excutive committee has decided to give an advertisement in your news Magazine (for Rs. 1000/-) for the noble cause.

ಕಾರ್ಯದರ್ಶಿ,

ಕೊಡಗು ಮತ್ತು ದಕ್ಷಿಣ ಕನ್ನಡ ಸಮಾಜ, ಬೆಂಗಳೂರು

ಮಾನ್ಯರೆ,

'ಕೊಡಗು ಸಂಗಾತಿ' ಪಾಕ್ಷಿಕ ಪತ್ರಿಕೆ ನೋಡಿದೆವು. ಮೈಸೂರಿನಿಂದ ಈ ರೀತಿಯ ಪ್ರಯತ್ನ ನಿಜಕ್ಕೂ ಮೆಚ್ಚುವಂತಹುದು. ಪತ್ರಿಕೆ ಸರ್ವತೋಮುಖ ಬೆಳವಣಿಗೆ ತರಲಿ ಎಂಬುದು ನಮ್ಮ ಹಾರೈಕೆ.

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ,

ಪಿ.ಡಿ. ಪುಟ್ಟಣ್ಣ, ಪ್ರಕಾಶಕರು,

ಮಲೆನಾಡು ವಾರ್ತೆ, ಮಡಿಕೇರಿ

ಮಾನ್ಯರೇ,

ತಾವುಗಳು 'ಕೊಡಗು ಸಂಗಾತಿ' ಎಂಬ ಪಾಕ್ಷಿಕ ಪತ್ರಿಕೆಯನ್ನು ಹೊರತರುವ ವಿಷಯ ತಿಳಿದು ತುಂಬಾ ಸಂತೋಷವಾಯಿತು. ಇದಕ್ಕಾಗಿ ನನ್ನ ತುಂಬು ಹೃದಯದ ಅಭಿನಂದನೆಗಳು. ಅಲ್ಲದೆ ನಿಮ್ಮ ಪತ್ರಿಕೆಯು ಪ್ರತಿಯೊಬ್ಬರ ಮನೆ ತಲುಪಿ ಜನರು ಮೆಚ್ಚಿ ಕೊಂಡಾಡಿ ಮುಂದೆ ಹೆಚ್ಚಿನ ಕೀರ್ತಿ ಹೊಂದಲಿ ಎಂದು ನಾನು ನಮ್ಮ ಕುಲದೇರನ್ನು ಪ್ರಾರ್ಥಿಸುತ್ತೆನೆ.

ತಮ್ಮ ವಿಶ್ವಾಸಿ,

ಟಿ.ಸಿ. ಸೋಮಯ್ಯ, ಕುಶಾಲನಗರ

ಪಟ್ಟಡ ಶೀಲಾಮಣಿಯವರಿಗೆ,

ಭಾಗಮಂಡಲ ಗೌಡ ಸಮಾಜದ ಅಧ್ಯಕ್ಷರ ನಮನಗಳು. ತಾವು ಮಹತ್ವದ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ಇಡೀ ಗೌಡ ಜನಾಂಗಕ್ಕೆ ಹೆಮ್ಮೆಯ ವಿಷಯ. ನಮ್ಮ ಸಹಕಾರವನ್ನು ನೀವು ನಿರೀಕ್ಷಿಸಬಹುದು. ನೀವು ನಮ್ಮ ನಾಡಿಗೆ ಭೇಟಿಕೊಡುವ ಉದ್ದೇಶವಿದ್ದಲ್ಲಿ ತಿಳಿಸಿ ನಿಮ್ಮ ಸಮ್ಮುಖದಲ್ಲಿ ಅಥವಾ ನಿಮ್ಮ ಸಂಗಾತಿ ಪತ್ರಕರ್ತರ ಬಳಗದವರ ಸಮ್ಮುಖದಲ್ಲಿ ಭಾಗಮಂಡಲ ಸಮಾಜದಲ್ಲಿ ಸಭೆ ಕರೆಸುವ ಏರ್ಪಾಡು ಮಾಡುತ್ತೇವೆ. ನೀವು ಖುದ್ದಾಗಿ ನಮ್ಮನಾಡಿನ ಜನತೆಗೆ ತಿಳುವಳಿಕೆ ಮತ್ತು ಮಾರ್ಗದರ್ಶನ ನೀಡಿ.

ನೀವು ಹಾಕಿಕೊಂಡಿರುವ ಯೋಜನೆ ಯಶಸ್ವಿಯಾಗಲಿ ಎಂದು ನಮ್ಮ ಕುಲದೇವರಾದ ಶ್ರೀ ವೆಂಕಟರಮಣಸ್ವಾಮಿ ಮತ್ತು ಶ್ರೀ ಕಾವೇರಿ ಮಾತೆ ನಿಮಗೆ ಸರ್ವಶಕ್ತಿಯನ್ನು ದಯಪಾಲಿಸಲಿ ಎಂದು ನಮ್ಮ ಕಾರ್ಯಕಾರಿ ಮಂಡಳಿ ಮತ್ತು ಜನತೆಯ ಪರವಾಗಿ ಪ್ರಾರ್ಥಿಸುತ್ತೆನೆ.

ಕೆ.ಡಿ. ಭೈರಪ್ಪ, I.P.M. ಅಧ್ಯಕ್ಷರು,

ಭಾಗಮಂಡಲನಾಡು ಗೌಡ ಸಮಾಜ,

ಅರೆಭಾಷಿಕ ವಿಭಾಗ :

ಕೊಡಗ್‌ನ ಕ್ರಾಂತಿವೀರ–ಸುಭೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ್ರು

(ಕಳೆದ ಸಂಚಿಕೆಯಿಂದ)

ಕಡೆ ಉಸ್ರ್ ಇರ್‍ವರೆಗೆ ನಾ, ಸ್ವಾತಂತ್ರ್ಯಕ್ಕಾಗಿ ಹೋರಾಡ್ನೆಂತೇಳಿ ತೀರ್ಮಾನ ಮಾಡ್ದ ಅಪ್ಪಯ್ಯಗೌಡ್ರು ತನ್ನ ಊರಿಗೆ ಬಂದ್ ಇರ್‍ವ ಒಂದೇ ಕೂಸುನ ಕಡೆಗೊಮ್ಮೆ ನೋಡಿ ಮುತ್ತು ಕೊಟ್ಟ್ ಹೆಣ್ಣ್‌ನ ಸಮ್‌ದಾನ ಪಡ್ಸಿ ಅವರ ಮುಂದೆನ ಜೀವನಕ್ಕೆ ಯಾವ ಬಂಗ ಬಾರದಂಗೆ ನೋಡಿಕಂಬಕೆ ಮನೆವುಕೆ ವಯಿಸಿವೆ. ಹಿಂಗೆ ಮನೆಕಡೆ ಯುವಸ್ತೆ ಮಾಡಿ ಬ್ರಿಟಿಷರ ಕೈಗೆ ಸಿಕ್ಕಿವೆ (ಅಪ್ಪಯ್ಯಗೌಡ್ರುಗೆ ಇಬ್ಬರೂ ಹೆಣ್ಣ್ ಇದ್ದೊಂತೇಳಿ ಸಾ ಒಂದು ಮೂಲಂದ ತಿಳ್ದ್ ಬಂದದೆ).

ಆಮೇಲೆ ಸೆರೆ ಸಿಕ್ಕಿದ ವೀರ ಮುಖಂಡರ್‌ಗಳ ವಿಚಾರಣೆನ ಬ್ರಿಟಿಷ್ ಸೈನ್ಯದ ಕಾನೂನು ಅಧಿಕಾರಿಗಳೇ ನಡ್ಸಿವೆ. ಚೆಟ್ಟಿ ಕುಡ್ಯ ಮತ್ತೆ ಕುರ್ತು ಕುಡ್ಯಂಗಳಿಬ್ಬರಿಗೂ ಜೀವಾವಧಿ ಶಿಕ್ಷೆ ವಿಧಿಸಿ ಸಿಂಗಾಪುರಕ್ಕೆ ಗಡಿಪಾರ್ ಮಾಡೆ ಮಾಡ್ದೊ. ಮಂಡಿರ ಉತ್ತಯ್ಯ, ಶಾಂತಳ್ಳಿ ಮಲ್ಲಯ್ಯ ಪಾರ್ಪತ್ರೆಗಾರ ಕೃಷ್ಣಯ್ಯ ಇನ್ನ್ ಮುಂತಾದೊವ್ಕೆ 7ರ್‌ಂದ್ 14 ವರ್ಷ ಸೆರೆವಾಸನ ಬ್ರಿಟಿಸ್‌ಸರಕಾರ ವಿಧಿಸಿ ಜೈಲಿಗೆ ನೂಕಿತ್.

ಅಮರ ಸುಳ್ಯ ಮತ್ತೆ ಕೊಡಗ್‌ನ ಈ ದಂಗೇಲಿ ನಾಯಕತ್ವನ ವಯಿಸ್ಕಂಡ್ ಬಾಳಸ್ಟ್ ಹೋರಾಟ ನಡ್ಸಿ ಬ್ರಿಟೀಸರ ಓಡ್ಸಿ ಸ್ವಾತಂತ್ರ ತರೋಕುಂತೇಳಿ ಪ್ರಯತ್ನ ಪಟ್ಟ ನಮ್ಮ ನಾಡ್‌ನ ಹೆಮ್ಮೆನ ಮಣ್ಣ ಗುಡ್ಡೆಮನೆ ಅಪ್ಪಯ್ಯಗೌಡ್ರುಗೆ ಮರಣ ದಂಡನೆ ಶಿಕ್ಷೆನ ಬ್ರಿಟಿಸ್ ಸರ್ಕಾರ ವಿಧಿಸಿದೆ. ಕ್ರಾಂತಿವೀರ ಗುಡ್ಡೆಮನೆ ಅಪ್ಪಯ್ಯಗೌಡ್ರನ ಜೆನಗಳ ಎದ್‌ರ್‌ಲೆ ನೇಣ್ ಹಾಕಿಕೆ ತೀರ್ಮಾನ ಮಾಡ್ದ ಬ್ರಿಟಿಸರ್ 1837ನೇ ಇಸ್ವಿ ಅಕ್ಟೊಬರ್ 31ನೇ ತಾರೀಕ್‌ನಂದ್ ಹೊತಾರೆ 10 ಗಂಟೆ ಸಮೆಲಿ ಮಡಿಕೇರಿ ಕೋಟೆ ಮುಂದೆನ ಯತ್ತರದ ಜಾಗಲಿ ಗಲ್ಲ್ ಕಂಬಕ್ಕೆ ನೇಣ್ ಹಾಕಿವೆ. ಕರ್ಳ್ ಕತ್ರುಸುವಂತ ಈ ಭೀಕರ ಚಿತ್ರನ ನಾಡ್‌ನವೆಲ್ಲ ನೋಡಕುಂತೇಳಿ ಕ್ಯಾ॥ ಲೀಹಾರ್ಡಿ ಜಿಲ್ಲೆನ ರೈತರ, ಎಲ್ಲಾ ಊರ್‌ನ ಪಟೇಲರ್‌ಗಳ ಕರ್ಸಿ ಅವರವರ ಕೈಲಿದ್ದ ಆಯುಧಗಳನ್ನೆಲ್ಲಾ ತನ್ನ ಕಾಲ್ಬುಡಲಿ ಇಸಿ ಸರಣಾಕೆ ಹೇಳಿ ನೀವೆಲ್ಲಾ ಇನ್ ಮುಂದೆ ನಮ್ಮ ಅಡಿಯಾಳಾಗಿ ಜೀವನ ಮಾಡೋಕುಂತೇಳಿ ಅಪ್ಪಣೆ ಮಾಡ್ದೆ. ಗುಡ್ಡೆಮನೆ ಅಪ್ಪಯ್ಯಗೌಡ್ರ ನೇಣ್ ಗಂಬಕ್ಕೆ ಏರ್ಸುವ ಬೀಕರ ದೃಶ್ಯನ ನೋಡ್ದ ಜೆನಗಳ ಕಣ್ಣ್‌ಲಿ ತೊಟ್ಟು ತೊಟ್ಟು ನೀರ್ ಹಂಕಿತ್. ನಮ್ಮ ನಾಯಕನ ಕಳ್ಕಂಡೊಂತೇಳಿ ಬಾಳ ದುಃಖಪಟ್ಟವೆ. ಸುಳ್ಯದ ಕೆದಂಬಾಡಿ ರಾಮಗೌಡ್ರ ಮತ್ತೆ ಕೃತಕ ಕಲ್ಯಾಣಸ್ವಾಮಿ ಪುಟ್ಟಬಸಪ್ಪನವರ ಸಾ ಮಂಗ್ಳೂರ್‌ನ ಬಿಕ್ರಣಕಟ್ಟೆ ಪಡುನ ಹತ್ರ ಗಲ್ಲ್ ಕಂಬಕ್ಕೆ ತೂಗ್ಹಾಕುವೆ.

ಸ್ವಾತಂತ್ರ್ಯನ ಉಳ್ಸಿಕೆ ಹೋರ್ಟ ಕ್ರಾಂತಿವೀರರ "ಹೋರಾಟ"ನ ನಡ್ಯದಂಗೆ ಬಂಗ ಮಾಡಿ ಕಡೆಗೂ ಬ್ರಿಟಿಸರ ಕೈಗೆ ಇವರ ಹಿಡ್ದ್ ಕೊಟ್ಟ್ ಅವುಕೆ ಸಾಯುಮಾಡ್ದ ಬ್ರಿಟಿಸರ ಎಂಜ್‌ಲ್ ತಿಂದೇ ಬೊದ್ಕಿರೆ ಲಾಯಿಕ್‌ಂತೇಳಿ ಇಷ್ಟಪಟ್ಟಿದ್ದ ಕೆಲವು ದೇಶ ದ್ರೋಹಿಗಳಿಗೆ ಬ್ರಿಟಿಸ್ ಸರ್ಕಾರ ಬೇಕಸ್ಟ್ ಬೋಮಾನ ಮತ್ತೆ ಅವರ 3 ತಲೆಮಾರ್‌ನವರೆಗೆ ಪಿಂಚಣಿ ಮತ್ತೆ ಉಂಬಳಿನ ಕೊಡ್ವಂತೇಳಿ ಘೋಷಣೆ ಮಾಡ್ತ್. ಈ ದಂಗೆ ಇಲ್ಲಿಗೆ ಕೊನೆ ಆತ್‌ಂತ ಹೇಳಕ್.

ಸ್ವಾತಂತ್ರ್ಯಕ್ಕಾಗಿ ತಮ್ಮ ರಕ್ತನ ಹರ್ಸಿದ ಈ (ದಂಗೆನ) ದೇಶ ಪ್ರೇಮಿಗಳ ಹೋರಾಟನ ಕುರ್ತ್ ಸರಿಯಾಗಿ ಪರೀಕ್ಷೆ ಮಾಡಿ ವರದಿ ಮಾಡಕುಂತೇಳಿ ಬ್ರಿಟಿಸರೆ ಆಯ್ಕೆ ಮಾಡ್ದ ಕಾಟನ್‌ನ ವರದಿ ಪ್ರಕಾರ ದಂಗೆಕಾರರ್‌ಗೆ ಕೊಡಗ್‌ಂದ ಬ್ರಿಟಿಸ್ ರಾಜಬಾರಿಕೆನ ಹಿಮ್ಮೆಟ್ಟಿಸಿ ಹಿಂದೂ ಆಳ್ವಿಕೆನ ತರೋಕುಂತೇಳ್ವ ಉದ್ದೇಶ ಮಾತ್ರ ಇತ್‌ಂತ ತಿಳ್ಸಿದೆ. ಹಿಂಗೆ ಈ ವರದಿನ ಪುನಃ ಪರೀಕ್ಷೆ ಮಾಡ್ದ ಬ್ಲೇರ್ ಸಾ ಇದ್ ನಿಜವಾಗಿಯು ಸ್ವಾತಂತ್ರ್ಯಕ್ಕಾಗಿ ಮಾಡ್ದ ಕ್ರಾಂತಿಯಲ್ಲದೆ ಮತ್ತೆ ಯಾವ ಉದ್ದೇಶಂದ ಅಲ್ಲಾತ ತಿಳ್ಸಿದೆ. ಆಗ ಕೊಡಗ್‌ನ ಚೀಫ್ ಕಮಿಷನರ್ ಆಗಿದ್ದ ಕಬ್ಬನ್, ಇದ್ ಜನತಾ ಬಂಡಾಯ ಇದರ್ಲ ಯಾವ ಸೊಂಸಯನೇ ಇಲ್ಲೆಂತೇಳ್ದೆ. ಕ್ರಾಂತಿವೀರ ಅಪ್ಪಯ್ಯಗೌಡ್ರು, ಮೂರ್ನಾಡ್ ಹಕ್ಕಲೆನ ಬಲಮುರಿ ಗ್ರಾಮದ ಗುಡ್ಡೆಮನೆ ಸುಬ್ಬಪ್ಪ ಗೌಡ್ರ ಮೂರ್ಜೆನ ತಮ್ಮಂದ್ರ ಪೈಕಿ ಪಾರ್ಪತ್ತೆಗಾರ ಆಗಿದ್ದ ತಮ್ಮಯ್ಯಗೌಡ್ರು ಸಾ ಅಣ್ಣನಂಗೆ "ಅಮರ ಸುಳ್ಯ ಕಾಟಕಾಯಿ" ದಂಗೇಲಿ ಬ್ರಿಟಿಸರ ವಿರುದ್ದ ಹೋರಾಡಿ ಶಿಕ್ಷೆ ಅನುಬೋವಿಸಿಯೊಳೊ. ಬಾಕಿ ಇಬ್ಬೊರು ತಮ್ಮಂದರ್ ಆದ ಪೊನ್ನಪ್ಪ ಮತ್ತೆ ಸುಬ್ಬಮ್ಮನವರ ಸಂತತಿಯವೇ ಇಂದ್ ಗುಡ್ಡೆಮನೆವಾಗಿ ಒಳದ್. ಅಪ್ಪಯ್ಯಗೌಡ್ರ ಹೆಣ್ಣ್ ಅಕ್ಕಮ್ಮ ಮತ್ತೆ ಹೆಣ್ಣ್‌ಮಗ ಪ್ರೇಮ ಇವು ಪೊನ್ನಪ್ಪ ಮತ್ತೆ ಸುಬ್ಬಪ್ಪಗೌಡ್ರ ಒಟ್ಟಿಗೆ ಇದ್ದವೆ. ಅಪ್ಪಯ್ಯಗೌಡ್ರ ಹೆಣ್ಣ್, ಗಂಡ ತೀರಿ ಹೋದಾ ಬೇಜಾರಲಿ ಹಾಸಿಗೆ ಹಿಡ್ದ್ ನಂತ್ರ ಹಂಇದಿನಲಿ ತೀರಿಹೋದಂತ

ತಿಳ್ಪ್ ಬಂದಿದೆ. ಮಗು ಪ್ರೆಮನ ಇವರ ಹತ್ರ ನೆಂಟ್ರೇ ಆಗಿದ್ದ ಚೇಯಪ್ಪನ ಮನೆಗೆ ಮೊದುವೆ ಮಾಡಿಕೊಟ್ಟೊ. ಅಪ್ಪಯ್ಯ ಗೌಡ್ರ ಸಂತತಿಯುವು ಕಳ್ದ ಎರಡ್ನೆ ಮಹಾ ಯುದ್ಧಲಿ ಭಾಗವಯಿಸಿ ದೇಶಕ್ಕಾಗಿ ತಮ್ಮ ರಕ್ತನ ಸೊರ್ಸಿದ ತ್ಯಾಗ ಜೀವಿಗ ಸಾ ಹೌದು.

ಹಿಂಗೆ ಅಪ್ಪಯ್ಯಗೌಡ್ರು ಬ್ರಿಟಸರ್ಗೆ ಬೊಲಿಯಾಗಿ ಇಂದಿಗೆ 160 ವರ್ಸ ಕಳ್ತ್. 15–8–1947ರಂದ್ ನಮ್ಮ ಭಾರತ ದೇಶ ಬ್ರಿಟಸ್ರಿಂದ ಮುಕ್ತಿ ಪಡ್ತ್. ಬೇರೆ ಬೇರೆ ಜಿಲ್ಲೆಗಳ್‌ಲಿ ಬ್ರಿಟಸರೊಟ್ನಗೆ ಹೋರಾಡಿ ರಕ್ತ ಚೆಲ್ಲಿ ಸತ್ತ ಹುತಾತ್ಮರ ಸ್ಮಾರಕಗ ನಮಿಗೆ ಕಾಂಬಕೆ ಸಿಕ್ಕದೆ. ಬೀದಿ ಗಳಿಗೆ ಇಂತ ತ್ಯಾಗಿಗಳ ಹೆಸ್ರನ ಹಾಕಿ ಅವುಕೆ ಗೌರವ ಮತ್ತೆ ಅವರ ಆತ್ಮಕ್ಕೆ ಶಾಂತಿ ಸಲ್ಲಿಸಿಯೋಳೊ. ಆದರೆ ನಮ್ಮ ಕೊಡಗ್‌ಜಿಲ್ಲೆಲಿ ಮಾತ್ರ ಗುಡ್ಡೆಮನೆ ಅಪ್ಪಯ್ಯಗೌಡ್ರಂತ ತ್ಯಾಗಿ ಜೀವಿಗಳಿಗೆ ಗೌರವ ಸಿಕ್ಕದಿರ್ದು ನಮ್ಮ ದುರಾದೃಷ್ಟಂತ ಹೇಳಕ್. ಇನ್ನಾದರ್ ಕೂಡಾ ನಾವು ಗುಡ್ಡೆಮನೆ ಅಪ್ಪಯ್ಯಗೌಡ್ರ ನೆನಪೂಗಾಗಿ ಅವರ ಪ್ರತಿಮೆನ ಸ್ಥಾಪನೆ ಮಾಡ್ನುದೋ ಅಥವ ಕೊಡಗ್‌ನ ರಾಜಧಾನಿ ಆದ ಮಡಿಕೇರಿನ ಈಗಿರುವ ಖಾಸಗಿ ಬಸ್ ನಿಲ್ದಾಣದಲ್ಲಿ ಗೌಡ್ರ ಪ್ರತಿಮೆ ನಿಲ್ಸಿರೆ ಅವರ ಹೆಸ್ರ ಇತಿಹಾಸದ ಪುಟೆಂದ ಅಳ್ದ ಹೋಗದಂಗೆ ಪ್ರಯತ್ನ ಮಾಡ್ಬು ಸ್ವತಂತ್ರ ನಾಡ್‌ನ ಮಕ್ಕ ಆದ ನಮ್ಮೆಲ್ಲರ ಕರ್ತವ್ಯ. ಬ್ರಿಟಸರ್ನ ಕೊಡಗ್‌ಂದ ಓಡ್ಸಿಕೆ ಹೆಬ್ಬುಲಿನಂಗೆ ಹೋರಾಟ ನಡ್ಸಿ ವೀರ ಮರಣನ ಸ್ವೀಕರಿಸಿದ ಗುಡ್ಡೆಮನೆ ಅಪ್ಪಯ್ಯಗೌಡ್ರುಗೆ ಅವರ ಮರಣ ಕಾಲಲಿ ಸುಮಾರ್ 40–45 ವರ್ಸ ಪ್ರಾಯ ಆಗಿತ್ತ್‌ಗಡ.

● **ಸೂದನ ಎಸ್. ಈರಪ್ಪ**
ಪಾಲೂರು.

ಬಾಚೆ ಇಲ್ಲೆ !

ಒಂದ್ ಮನೇಲಿ ಮೂರ್ ಗೂಡೆಗ, ಆ ಗೂಡೆಗಳಿಗೆ ಲಾಯ್ಕ್‌ಲಿ ಮಾತಾಡಿಕೆ ಬಾದುಲೆ. ಒಂದಿನ ಆ ಗೂಡೆಗಳ ಮನೆಗೆ ಅವರ ನೋಡಿಕೆ ನೆಂಟ್ರ ಬಂದೊ. ನೆಂಟ್‌ರೊಟ್ಟೆಗೆ ಮಾತ್ರ ಯಾರ್ ಮಾತಾಡಿಕೆ ಬೊತ್ತ್‌ಂತ ಗೂಡೆಗಳ ಅಯ್ಯೆ ಸುರುಲೇ ಹೇಳಿಬುಟ್ಟಿತ್ !

ನೆಂಟ್ರಿಗೆ ಪುಂಡಿ (ಕಡ್‌ಂಬು) ಇಕ್ಕಿಕೆ ಗೂಡೆಗಳ ಹತ್ರ ಹೇಳ್ದೊ. ಪುಂಡಿ ಇಕ್ಕಿಕಾಕನ ನೆಂಟ್‌ರೊಬ್ಬರ ಬಾಳಲೆಂದ ಒಂದ್ ಪುಂಡಿ ಉರ್‌ಳಿಹೋತು. ಆಗ ಒಂದ್ ಗೂಡೆ "ನೆಂತ್ರ ಬಾಲಲೆಂದ ಪುಂದಿ ಹೊಂಕಿತ್" ತ ಹೇಳ್ತ್. ಅಷ್ಟೊತ್ತಿಗೆ ಇನ್ನೊಂದ್‌ಗೂಡೆ "ನಿಂಗೆ ಮಾತಾದ್ ಬದತ ಹೇಲ್ದ ಅಲಾ" ತ ಹೇಳ್ತ್. ಆಗ ಮತ್ತೊಂದ್ ಗೂಡೆ ಅದಿಕೆ ಹೇಳ್ರೆ ಬಾಚೆ ಇಲ್ಲೆತ ಹೇಳ್ತ್. ಇದರ್‌ಂದಾಗಿ ನೆಂಟ್ರಗಳಿಗೆ ಈ ಗೂಡೆಗಳಿಗೆ ಲಾಯ್ಕ್‌ಲಿ ಮಾತಾಡಿಕೆ ಬಾದುಲೆಂತಾ ಗೊತಾಗಿ ಗೂಡೆ ಬುಟ್ಟ್ ಸೀದಾ ಹೋದೊ.

– **ಕೊಡೆಕಲ್ಲು ಶಶಿಧರ**

ಕೊಡಗು ಗೌಡ ಮಿತ್ರ ಬಳಗ
ಹೂಟಗಳ್ಳಿ, ಮೈಸೂರು
ಇದೇ ಸಂಚಿಕೆಯು ಕೊನೆಯು ಪುಟದ ಜಾಹೀರಾತಿನಲ್ಲಿ
ಆಕಸ್ಮಿಕವಾಗಿ ಬಿಟ್ಟುಹೋದ ಹೆಸರುಗಳು :-
ಶ್ರೀ ಮೂಟೇರ ಎನ್. ನಂಜಪ್ಪ
ಶ್ರೀ ಪೂಜಾರಿ ಬಿ. ಕುಮೋದರ

ಗವುಡ ಕನ್ನಡದ ಬೆಳ್ಕ್

ಬರೀ ಆಡ್ ಮಾತಾಗಿ ಇರ್ವ ಗೌಡ ಕನ್ನಡದ ಬರೆಹ ರೂಪಕ್ಕೆ ತಾದು ಬಾರಿ ಕಷ್ಟದ ಕೆಲ್ಸ. ಯಾಕೆನ್ತೆ ಹೇಳ್ರೆ ಇನ್ದ್‌ನ ಹೊಸಕನ್ನಡ ಬಾಸೆನ ರೂಢಿ ಎಲ್ಲೋಮ್ಕೆ ಇರ್‌ಕ್ನ ಗೌಡ ಕನ್ನಡಲಿ ಸುದ್ಧ ಕನ್ನಡದ ಬರೀ ಮೂವತ್ತೆರ್ಡ್ ಅಕ್‌ಸರಗಳ ಬಳ್ಕೆನ್ದ ಎಲ್ಲೋಮ್ಕೆ ಬಾರಿ ತಮಾಸೆ ಕಾಮ್ಬೊದು. ನನ್ನ ಬರೆಹದ ಗೌಡ ಮಾತ್‌ಗಳ್ಲಿ ಸಂಸ್ಕೃತ ಬಾಸೆನ್ದ ಕನ್ನಡಕ್ಕೆ ಸೇರ್ದ ಅಕ್‌ಸರಗಳ ಬುಟ್ಟ್ ಬರೊಬೆಳೆ. ಅದರ್‌ಲ್ಯೂ ಅನುಸ್ವಾರ ಇಲ್ಲದಿರ್ದು ವಿಸೇಸ. ಕೆಲ್ವುಕಡೆ ಮಹಾ ಪ್ರಾಣಾಕ್ಷರಗಳ, ಕೆಲ್ವು ಕಡೆ ಅನುಸ್ವಾರನ ಸೇರ್ಸಿ ಬರ್ಪರೆ, ಬರ್ದದ್ ಇನ್ದ್‌ನ 'ಚೌ ಚೌ ತಿನ್ಸ್‌ನ ಹಾನ್ಗೆ ಆದೆ. ಆದ್ದರ್‌ನ್ದ ನಮ್ಮ ಗೌಡ ಬಂಧುಗ ಎಲ್ಲಾ ನಮ್ಮ ಬಾಸೆನ ಮೇಲೆ ಪ್ರೀತಿ ಇಸಿ, ಒಸಿ ತಾಳ್ಮೆ ಸೇರ್‌ಸಕನ್ಡ್ ವಿಚಾರ ಮಾಡ್ಕೊಣೊಕು ಅನ್ತ ಕೇಳ್ಕಣೆ. ಆಡ್ ಮಾತ್‌ನ ಉಚ್ಚಾರ ಬೇರೆ. ಅದರ ಬರ್‌ಕಾನ ತೋರ್ಸಿಕೆ ವಿಜ್ಞಾನದ ಕೆಲ್ವು ಗುರ್ತುಗಳ ಹಾಕೋಕಾದೆ. ಉದಾ : ಅವ, ಬೇಕ್, ಹೆಳ್‌ಕನ್ಡ್, ಕೆಮ್ಮಿ, ಆಡ್, ಬಾ, ಬಂಡೊ, ಇವೇ, ಕೆಲ್ವು ನಮ್ಮ ಬಾಸೆ ಉಚ್ಚಾರಲ್ಯೂ ಸಬ್ದಗಳ್ಯೂ ಬೇರೆ ಬೇರೆ ಕಡೆ ಬೇರೆ ಬೇರೆ ಇದ್ದರೂ, ಅದ್ ಕನ್ನಡ ಹುಟ್‌ಕನ್ಡ ಕಾಲನ್ದಳೇ ಇದ್ದ್ ಕನ್ನಡ ಬಾಸೆನ ಆಡ್ ರೂಪುನ ಹೆಚ್ಚಾಗಿ ಉಳ್ಸಿಕನ್ಡ್ ಉಟ್ಟು ಅನ್ತ ಹೇಳುದರ ಎಲ್ಲೊವ್ ಒಪ್ಪ್‌ಕಣಕಾದೆ.

ಶ್ರೀಮತಿ ನಂಗಾರ್ ಲಲಿತ,
ಎಂ.ಎ., ಎಂ.ಎಡ್.(ಕನ್ನಡ)
ಪುತ್ತೂರು.

ನಿಜವಾಗಲೂ ಧೈರ್ಯದಿಂದ ಈ ಸಾಹಸಕ್ಕೆ ಕೈ ಹಾಕಿದ್ದೀರಿ.
ಹಠ ಛಲದಿಂದ ಮುನ್ನುಗ್ಗಿ ಸಾಧಿಸುವ ನಿಮ್ಮ
ಈ ಪ್ರವೃತ್ತಿಗೆ ದೈವ ಕೃಪೆಯೊಡನೆ ನಮ್ಮೆಲ್ಲರ
ಸಹಕಾರ ಇದೆಯೆನ್ನುತ್ತಾ ಈಗ ಪ್ರಾರಂಭವಾಗಿರುವ

ಕೊಡಗು ಸಂಗಾತಿ

ಪತ್ರಿಕೆಗೆ ಶುಭವನ್ನು ಹಾರೈಸುವೆವು.

ಯಿಂದ :

ಶ್ರೀ ಪಟ್ಟಡ ನಂಜುಂಡ ಜಯರಾಮ್
(ಕರ್ನಾಟಕ ಗೃಹಮಂಡಳಿ, ಮೈಸೂರು)

ಮತ್ತು

ಶ್ರೀಮತಿ ಪಟ್ಟಡ ಜಯರಾಮ್ ಪೂವಮ್ಮ
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)

ಹಾಗೂ ಮಕ್ಕಳಾದ

ಕು॥ ಪಟ್ಟಡ ದಿವ್ಯಶ್ರೀ ಜಯರಾಮ್
ಮಾ॥ ಪಟ್ಟಡ ದೀಪಕ್ ಜಯರಾಮ್
ಕು॥ ಪಟ್ಟಡ ಉಷಾ ಜಯರಾಮ್

ವಿಳಾಸ : ಮನೆ ನಂ. 1691, 2ನೇ ಕ್ರಾಸ್, 6ನೇ ಮೈನ್,
ವಾಟರ್ ಟ್ಯಾಂಕ್ ಹತ್ತಿರ, ವಿಜಯನಗರ 2ನೇ ಹಂತ,
ಮೈಸೂರು-570 017.

ನೂತನವಾಗಿ ಪ್ರಾರಂಭವಾಗಿರುವ



ಕೊಡಗು ಸಂಗಾತಿ



ಪತ್ರಿಕೆಯು ನಿರಂತರವಾಗಿ ಹೊರಹೊಮ್ಮಿ ಬರುವುದಲ್ಲದೆ
ಯುವ ಶಕ್ತಿಯನ್ನು ಸಂಘಟಿಸಿ, ಐಕ್ಯತೆ ಮತ್ತು ಸಾಧನೆ
ಯಾವುದೇ ಒಂದು ಜನಾಂಗದ ಹಾಗೂ ದೇಶದ ಪ್ರಗತಿ ಎನ್ನುವ
ನಿಮ್ಮ ಧ್ವನಿಗೆ ನಮ್ಮೆಲ್ಲರ ವೈಯುಕ್ತಿಕ ಹಾರ್ಧಿಕ ಶುಭಾಶಯಗಳು....

ಇಂದ :

ಶ್ರೀಯುತರುಗಳಾದ-

ಮುಕ್ಕಾಟಿ ಸಿ. ಉಲ್ಲಾಸ್ ಮತ್ತು ಮನೆಯವರು
ಚಿಕ್ಕೋಡಿ ಕೆ. ರಮೇಶ್ ,,
ನೆಕ್ಕಿಲನ ಎ. ಹರೀಶ್ ,,
ಪಟ್ಟಡ ಎಸ್. ಜಗದೀಶ್ ,,
ಚೆರಿಯಮನೆ ಬಿ. ಉಮೇಶ್ ,,
ಚೆರ್‌ಕನ ಎಂ. ಲವ ,,

(ಕೊಡಗು ಗೌಡ ಮಿತ್ರರ ಬಳಗ, ಹೂಟಗಳ್ಳಿ, ಮೈಸೂರು)

ವಿಳಾಸ : ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್, ಹೂಟಗಳ್ಳಿ,
ಬೆಳವಾಡಿ ಅಂಚೆ, ಮೈಸೂರು-571186.

Edited, Published and Owner by PATTADA. P. SHEELAMANI, Published at No. 322, Bogadi Circle, Hinkal Post, Mysore-570017.
Printed at ASHIRWAD PRINTERS, 180/A, 6th Main, Vinayakanagar, Mysore-570012.